# ಇತಿಹಾಸ

# ಅಧ್ಯಾಯ–1,

# ಭಾರತಕ್ಕೆ ಯೂರೋಪಿಯನ್ನರ ಆಗಮನ

## I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ

1. 1453ರಲ್ಲಿ ಆಟೋಮನ್ ಟರ್ಕ್‌ರು **ಕಾನ್‌ಸ್ಟಾಂಟಿನೋಪಲ್** ನಗರವನ್ನು ವಶಪಡಿಸಿಕೊಂಡರು
2. ಭಾರತ ಹಾಗೂ ಯೂರೋಪ್ ನಡುವೆ ಹೊಸ ಜಲಮಾರ್ಗವನ್ನು **ವಾಸ್ಕೋಡಗಾಮ**ನು ಕಂಡುಹಿಡಿದನು
3. ಭಾರತದಲ್ಲಿ ಫ್ರೆಂಚರ ರಾಜಧಾನಿ **ಪಾಂಡಿಚೇರಿ**
4. ರಾಬರ್ಟ್ ಕ್ಲೈವ್‌ನು 1757ರಲ್ಲಿ ಸಿರಾಜುದ್ದೌಲನ **ಮೇಲೆ ಪ್ಲಾಸೀ ಕದನ** ಸಾರಿದನು
5. ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ದಿವಾನಿ ಹಕ್ಕನ್ನು **ಎರಡನೇ ಷಾ ಆಲಂ** ನೀಡಿದನು
6. ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವನು **ರಾಬರ್ಟ್ ಕ್ಲೈವ್**

## II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ಮಧ್ಯಕಾಲದಲ್ಲಿ ಭಾರತ ಮತ್ತು ಯೂರೋಪ್ ನಡುವೆ ವ್ಯಾಪಾರ ಹೇಗೆ ನಡೆಯುತ್ತಿತ್ತು?
   ಮಧ್ಯದಲ್ಲಿ ಭಾರತದೊಂದಿಗೆ ಯೂರೋಪಿಯನ್ನರ ವ್ಯಾಪಾರವು ಕಾನ್‌ಸ್ಟಾಂಟಿನೋಪಲ್ ನಗರದ ಮೂಲಕ ಜರುಗುತ್ತಿತ್ತು. ಅರಬ್ಬರು ಭಾರತದ ವ್ಯಾಪಾರೀ ಸರಕುಗಳನ್ನು ಕಾನ್‌ಸ್ಟಾಂಟಿನೋಪಲ್‌ಗೆ ತರುತ್ತಿದ್ಧರು. ಇಟಲಿಯ ವ್ಯಾಪಾರಿಗಳು ಈ ಸರಕುಗಳನ್ನು ಖರೀದಿಸಿ ಯೂರೋಪ್ ಖಂಡದಲ್ಲಿ ಮಾರುತ್ತಿದ್ದರು
2. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಸಹಾಯಕವಾದ ಅಂಶಗಳನ್ನು ಚರ್ಚಿಸಿ
   - ಕಾನ್‌ಸ್ಟಾಂಟಿನೋಪಲ್ ನಗರದ ಪತನ
   - ಭಾರತೀಯ ಮಸಾಲೆ ಪದಾರ್ಥಗಳಿಗಿದ್ದ ಅಪಾರ ಬೇಡಿಕೆ
   - ನಾವಿಕರ ದಿಕ್ಸೂಚಿ, ಸಿಡಿಮದ್ದು, ಬಂದೂಕು, ಭೂಪಟಗಳ ಅನ್ವೇಷಣೆ
   - ಕ್ರೈಸ್ತ ಧರ್ಮದ ಪ್ರಸಾರ
3. ಭಾರತಕ್ಕೆ ವ್ಯಾಪಾರಕ್ಕಾಗಿ ಬಂದ ಯೂರೋಪಿಯನ್ನರನ್ನು ಪಟ್ಟಿ ಮಾಡಿ
   ಪೋರ್ಚುಗೀಸರು. ಡಚ್ಚರು, ಬ್ರಿಟೀಷರು ಹಾಗೂ ಫ್ರಂಚರು
4. ಎರಡನೇ ಕರ್ನಾಟಿಕ್ ಯುದ್ಧವನ್ನು ವಿವರಿಸಿ.
   ಫ್ರೆಂಚರ ನೆರವಿನೊಂದಿಗೆ ಹೈದರಾಬಾದಿನಲ್ಲಿ ಸಲಬತ್‌ಜಂಗ್ ನಿಜಾಮ ಹುದ್ದೆಗೂ ಹಾಗೂ ಕರ್ನಾಟಕ್‌ನಲ್ಲಿ ಚಂದಾಸಾಹೇಬ್ ನವಾಬನ ಹುದ್ದೆಗೂ ನೇಮಿಸಲ್ಪಟ್ಟರು. ಚಂದಾಸಾಹೇಬನು ತಿರುಚನಾಪಳ್ಳಿ ಕೋಟೆ ಮೇಲೆ ಧಾಳಿ ಮಾಡಿದಾಗ ಚಾಣಕ್ಷನಾದ ರಾಬರ್ಟ್‌ಕ್ಲೈವ್‌ನು ಆರ್ಕಾಟಿನ ಮೇಲೆ ಧಾಳಿಮಾಡಿದನು. ಆರ್ಕಾಟಿನಲ್ಲಿ ನಡೆದ ಯುದ್ಧದಲ್ಲಿ ಚಂದಾಸಾಹೇಬನನ್ನು ಕೊಲೆಮಾಡಲಾಯಿತು. ಮಹಮ್ಮದ್ ಆಲಿಯು ಅರ್ಕಾಟಿನ ನವಾಬನಾಗಿ ನೇಮಿಸಲ್ಪಟ್ಟನು
5. ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ
   **ಕಾರಣಗಳು :–**
   - ದಸ್ತಕ್‌ಗಳ ದುರುಪಯೋಗ
   - ನವಾಬನ ಅನುಮತಿಯಿಲ್ಲದೇ ಬ್ರಿಟೀಷರು ಪೋರ್ಟ್ ವಿಲಿಯಂ ಕೋಟೆ ಬಲಪಡಿಸಿಕೊಂಡಿದ್ದು
   - ಕಪ್ಪು ಕೋಣೆ ದುರಂತ

   **ಪರಿಣಾಮಗಳು :–**
   - ಸಿರಾಜುದ್ದೌಲನ ಕೊಲೆಯಾಯಿತು
   - ಮೀರ್ ಜಾಫರ್ ಬಂಗಾಳದ ನವಾಬನಾದನು
   - ಬ್ರಿಟಿಷರಿಗೆ 24 ಪರಗಣ ಪ್ರದೇಶ ಬಳುವಳಿಯಾಗಿ ದೊರೆಯಿತು
6. ಬಕ್ಸಾರ್ ಕದನದ ಫಲಿತಾಂಶಗಳನ್ನು ವಿವರಿಸಿ
   - ಮೀರ್ ಖಾಸಿಂನ ಒಕ್ಕೂಟ ಸೇನೆಗೆ ಸೋಲಾಯಿತು

- ಎರಡನೇ ಷಾ ಆಲಂ ಬ್ರಿಟೀಷರಿಗೆ ಬಂಗಾಳದ ದಿವಾನಿ ಹಕ್ಕನ್ನು ಹಸ್ತಾಂತರಿಸಿದನು
- ಬಂಗಾಳದಲ್ಲಿ ಬ್ರಿಟೀಷರು ಭದ್ರವಾಗಿ ನೆಲೆಯೂರಿದರು
- ಔದ್‌ನ ನವಾಬನು 50 ಲಕ್ಷ ರೂಗಳನ್ನು ಯುದ್ಧ ಪರಿಹಾರವಾಗಿ ಬ್ರಿಟೀಷರಿಗೆ ನೀಡಬೇಕಾಯಿತು

7. ದ್ವಿಸರ್ಕಾರ ಪದ್ಧತಿಯನ್ನು ವ್ಯಾಖ್ಯಾನಿಸಿ
   ರಾಬರ್ಟ್‌ಕ್ಲೈವ್ ಜಾರಿಗೆ ತಂದ ದ್ವಿಸರ್ಕಾರ ಪದ್ಧತಿಯು ಎರಡು ಬಗೆಯ ಅಧಿಕಾರವನ್ನು ಹೊಂದಿತ್ತು
   - **ದಿವಾನಿ ಹಕ್ಕು** : ಇದು ಬ್ರೀಟೀಷರು ಭೂಕಂದಾಯ ಸಂಗ್ರಹಿಸುವ ಹಕ್ಕಾಗಿತ್ತು
   - **ನಿಜಾಮಿ ಹಕ್ಕು** ; ಇದು ನವಾಬನಿಗಿದ್ದ ದೈನಂದಿನ ಆಡಳಿತ, ನ್ಯಾಯ ತಿರ್ಮಾನ ಮಾಡುವ ಹಕ್ಕಾಗಿತು

# ಅಧ್ಯಾಯ –2
# ಬ್ರಿಟೀಷ್ ಆಳ್ವಿಕೆಯ ವಿಸ್ತರಣೆ

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಮೊದಲನೇ ಆಂಗ್ಲೋ–ಮರಾಠ ಯುದ್ಧದ ಅಂತ್ಯದಲ್ಲಿ ಮರಾಠರು ಹಾಗೂ ಬ್ರಿಟೀಷರ ಮಧ್ಯೆ **ಸಾಲ್ಬಾಯ್** ಒಪ್ಪಂದ ಆಯಿತು
2. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದವನು **ಲಾರ್ಡ್ ವೆಲ್ಲೆಸ್ಲಿ**
3. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದ ವರ್ಷ
4. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ನು ಜಾರಿಗೆ ತಂದವನು **ಲಾರ್ಡ್ ಡಾಲ್‌ಹೌಸಿ**

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ಮೊದಲನೇ ಆಂಗ್ಲೋ–ಮರಾಠ ಯುದ್ದದ ಕಾರಣಗಳನ್ನು ವಿವರಿಸಿ
   - ರಘುನಾಥರಾಯನಿಂದ ಪೇಶ್ವೆ ನಾರಯಣರಾವ್‌ನ ಕೊಲೆ
   - ಮರಾಠ ಒಕ್ಕೂಟದಿಂದ ಪೇಶ್ವೆ ಹುದ್ದೆಗೆ ಮಾದವರಾವ್‌ನ ನೇಮಕ
   - ಇದರಿಂದ ವಿಚಲಿತನಾದ ರಘುನಾಥರಾಯನು ಬ್ರಿಟೀಷರ ನೆರವುಯಾಚಿಸಿದ್ದು
2. ಸಹಾಯಕ ಸೈನ್ಯ ಪದ್ದತಿಯ ನಿಂಬಂಧನೆಗಳಾವುವು? ವಿವರಿಸಿ
   - ಈ ಪದ್ಧತಿಯ ಅನುಸಾರ ದೇಶಿಯ ರಾಜನು ಬ್ರಿಟಿಷರೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳಬೇಕಾಗಿತ್ತು
   - ದೇಶಿಯ ರಾಜರಿಗೆ ಬ್ರಿಟೀಷರು ಸೈನ್ಯವನ್ನು ನೀಡುತ್ತಿದ್ದರು
   - ಬ್ರಿಟಿಷರ ಅನುಮತಿಯಿಲ್ಲದೆ ಈ ಸೈನ್ಯವನ್ನು ಬಳಸುವಂತಿರಲಿಲ್ಲ
   - ಸೈನ್ಯದ ವೆಚ್ಚವನ್ನು ದೇಶಿಯ ರಾಜರೇ ನೋಡಿಕೊಳ್ಳಬೇಕಾಗಿತ್ತು
   - ದೇಶಿಯ ರಾಜರ ಆಸ್ಥಾನದಲ್ಲಿ 'ರೆಸಿಡೆಂಟ್' ಎಂಬ ಅಧಿಕಾರಿಯನ್ನು ಬ್ರಿಟಿಷರು ನೇಮಿಸುತ್ತಿದ್ದರು.
3. ಮೂರನೇ ಆಂಗ್ಲೋ–ಮರಾಠ ಯುದ್ದವನ್ನು ವಿವರಿಸಿ
   ಮೂರನೇ ಆಂಗ್ಲೋ–ಮರಾಠ ಯುದ್ದದಲ್ಲಿ ಪೇಶ್ವೇ ಎರಡನೇ ಬಾಜಿರಾಯನು ಪುಣೆಯಲ್ಲಿನ ಬ್ರಿಟೀಷ್ ರೆಸಿಡೆನ್ಸಿ ಮತ್ತು ಕೋರೆಗಾವ್ ಹಾಗೂ ಆಷ್ಟಿಗಳ ಮೇಲೆ ಧಾಳಿಮಾಡಿ ಸೋಲಿಸಲ್ಪಟ್ಟನು. ಇಂಗ್ಲೀಷರು ಪೇಶ್ವೆ ಹುದ್ದೆಯನ್ನು ರದ್ದು ಪಡಿಸಿದರಲ್ಲದೆ ಪೇಶ್ವೆ ಎರಡನೇ ಬಾಜಿರಾಯನಿಗೆ ವಿಶ್ರಾಂತಿ ವೇತನವನ್ನು ನೀಡಿದರು. ಶಿವಾಜಿಯ ವಂಶಸ್ಥ ಪ್ರತಾಪ್‌ಸಿಂಹನನ್ನು ಮರಾಠರ ಮುಖಂಡರಾಗಿ ನೇಮಿಸಿದರು
4. ಬ್ರಿಟೀಷ್ ಅಧಿಕಾರ ವಿಸ್ತರಣೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯು ಹೇಗೆ ಸಹಕಾರಿಯಾಯಿತು ವಿವರಿಸಿ
   ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯನ್ವಯ ದೇಶಿಯ ರಾಜನಿಗೆ ಸ್ವಾಭಾವಿಕ ಮಕ್ಕಳು ಇಲ್ಲದಿದ್ದರೆ ಆತ ತನ್ನ ಸಾಮ್ರಾಜ್ಯವನ್ನು ದತ್ತು ಮಕ್ಕಳಿಗೆ ಹಸ್ತಾಂತರ ಮಾಡುವಂತಿರಲಿಲ್ಲ

ಈ ನೀತಿಯ ಅನುಸಾರ ಸತಾರ, ಝಾನ್ಸಿ, ನಾಗಪುರ, ಜೈಪುರ, ಸಂಬಲ್‌ಪುರ, ಉದಯಪುರಗಳನ್ನು ಡಾಲ್ ಹೌಸಿ ವಶಪಡಿಸಿಕೊಂಡನು. ಈ ನೀತಿಯನ್ನು ಜಮೀನ್ದಾರರಿಗೂ ಅನ್ವಯಿಸಿದ್ದರಿಂದ ಜಮೀನ್ದಾರರು ತಮ್ಮ ಹಕ್ಕಗಳನ್ನು ಕಳೆದುಕೊಂಡರು, ಈ ನೀತಿಯು ರಾಜಕೀಯ ಅಸ್ತ್ರವಾಗಿ ಬಳಸಲ್ಪಟ್ಟಿತು

5. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾವುವು?
   ಸತಾರ, ಝಾನ್ಸಿ, ನಾಗಪುರ, ಜೈಪುರ, ಸಂಬಲ್‌ಪುರ, ಉದಯಪುರಗಳು ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಒಳಪಟ್ಟ ರಾಜ್ಯಗಳಾಗಿವೆ

## ಅಧ್ಯಾಯ –3
## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು.

**I ಖಾಲಿಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ದಿವಾನಿ ಅದಾಲತ್ ಎಂಬ ನಾಗರೀಕ ನ್ಯಾಯಾಲಯವನ್ನು ಸ್ಥಾಪಿಸಿದವನು **ಲಾರ್ಡ್ ವಾರನ್ ಹೇಸ್ಟಿಂಗ್ಸ್**
2. ಸೂಪರಿಡೆಂಟ್‌ಂಟ್ ಆಫ್ ಪೋಲೀಸ್ ಹುದ್ದೆಯನ್ನು ಸೃಷ್ಟಿಸಿದವನು **ಲಾರ್ಡ್ ಕಾರ್ನವಾಲೀಸ್**
3. ಖಾಯಂ ಜಮೀನ್ದಾರಿ ಪದ್ದತಿಯನ್ನು ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ **1793** ರಲ್ಲಿ ಜಾರಿಗೆ ತರಲಾಯಿತು
4. ಅಲೆಕ್ಸಾಂಡರ್ ರೀಡ್ ಜಾರಿಗೆ ತಂದ ಕಂದಾಯ ಪದ್ದತಿ **ರೈತವಾರಿ ಪದ್ದತಿ**
5. ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ ನೀಡಿದ ಮೊದಲ ಬ್ರಿಟೀಷ್ ಅಧಿಕಾರಿ **ಲಾರ್ಡ್ ವಾರನ್ ಹೇಸ್ಟೀಂಗ್ಸ್**
6. ರೇಗ್ಯೂಲೇಟಿಂಗ್ ಕಾಯಿದೆಯು ಜಾರಿಗೆ ಬಂದ ವರ್ಷ **1773**

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

**1.** ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಬ್ರಿಟೀಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿ
   **ದಿವಾನಿ ಅದಾಲತ್:**–ಇದು ನಾಗರೀಕ ನ್ಯಾಯಾಲಯವಾಗಿದ್ದು ಹಿಂದೂಗಳಿಗೆ ಹಿಂದೂ ಧರ್ಮಶಾಸ್ತ್ರದ ಪ್ರಕಾರ ಮುಸಲ್ಮಾನರಿಗೆ ಷರೀಯತ್ ಕಾನೂನಿನ ಪ್ರಕಾರ ನ್ಯಾಯ ತಿರ್ಮಾನ ಮಾಡಲಾಗುತ್ತಿತ್ತು. ಈ ನ್ಯಾಯಾಲುಗಳ ಅಧ್ಯಕ್ಷತೆಯನ್ನು ಯೂರೋಪಿನ ಅಧಿಕಾರಿಗಳು ವಹಿಸುತ್ತಿದ್ದರು
   **ಫೌಜದಾರಿ ಅದಾಲ್:**–ಇದು ಅಪರಾಧಿಕ ನ್ಯಾಯಾಲಯವಾಗಿದ್ದು 'ಖಾಜಿ'ಗಳು ನ್ಯಾಯ ತೀರ್ಮಾನ ಮಾಡುತ್ತಿದ್ದರು. ಇದರ ಅಧ್ಯಕ್ಷತೆಯನ್ನು ಯೂರೋಪಿಯನ್ನರೇ ವಹಿಸಿಕೊಳ್ಳತ್ತಿದ್ದರು

**2.** ಬ್ರಿಟೀಷ್ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು?
   - ಪ್ರತೀ ಜಿಲ್ಲೆಗಳನ್ನು ಅನೇಕ ಪೋಲೀಸ್ 'ಠಾಣೆ' ಗಳನ್ನಾಗಿ ವಿಭಜಿಸಲಾಯಿತು
   - ಪ್ರತೀ ಠಾಣೆಯ ಉಸ್ತುವಾರಿಗೆ 'ಕೊತ್ವಾಲ'ರನ್ನು ನೇಮಿಸಲಾಯಿತು
   - ಪೋಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ರ ಅಧೀನಕೊಳ್ಳಪಟ್ಟರು
   - 1902 ರಲ್ಲಿ 'ಪೋಲೀಸ್ ಕಮೀಷನ್ ಕಾಯ್ದೆ'ಯನ್ನು ಜಾರಿಗೆ ತರಲಾಯಿತು

**3.** ಖಾಯಂ ಜಮೀನ್ದಾರಿ ಪದ್ದತಿಯು ರೈತರನ್ನು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿಸಿ, ಸಾಲದಲ್ಲೇ ಸಾಯುವಂತೆ ಮಾಡಿತು". ಹೇಗೆ? ವಿಮರ್ಶಿಸಿ
   - ಈ ಪದ್ದತಿಯು ರೈತರ ಭೂ ಮಾಲಿಕತ್ವವನ್ನು ಕಸಿದುಕೊಂಡಿತು
   - ಜಮೀನ್ದಾರರು ನಿಗಧಿತ ದರಕ್ಕಿಂತ ಹೆಚ್ಚಿನ ತೆರಿಗೆಯನ್ನು ರೈತರಿಂದ ಸಂಗ್ರಹಿಸುತ್ತಿದ್ದರು
   - ರೈತರು ಜಮೀನ್ದಾರರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸಬೇಕಾಗಿತ್ತು
   - ಜಮೀನ್ದಾರರು ರೈತರನ್ನು ಶೋಷಣೆಗೊಳಪಡಿಸಿದರಲ್ಲದೇ ರೈತರ ಜೀವನ ಆಭದ್ರತೆಯಿಂದ ಕೂಡಿತು

   ಈ ಎಲ್ಲಾ ಕಾರಣಗಳಿಂದ ಖಾಯಂ ಜಮೀನ್ದಾರಿ ಪದ್ದತಿಯು ರೈತರನ್ನು "ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿಸಿ, ಸಾಲದಲ್ಲೇ ಸಾಯುವಂತೆ ಮಾಡಿತು" ಎನ್ನಬಹುದು

**4.** ರೈತವಾರಿ ಪದ್ಧತಿಯು ಒಳಗೊಂಡ ಪ್ರಮುಖಾಂಶಗಳಾವುವು?

- ಉಳುವವನನ್ನೇ ಭೂಮಿಯ ಒಡೆಯನೆಂದು ಗುರುತಿಸಿತು
- ಭೂ ಮಾಲಿಕನು ಒಟ್ಟು ಉತ್ಪನ್ನದ 50% ರಷ್ಟನ್ನು ತೆರಿಗೆಯಾಗಿ ನೀಡಬೇಕಾಗಿತ್ತು
- ಭೂ ಕಂದಾಯದ ಪರಿಷ್ಕರಣೆಯ ಅವಧಿ 30 ವರ್ಷಗಳಾಗಿತ್ತು
- ತೆರಿಗೆ ಸಂಗ್ರಹಿಸಲು ಬ್ರಿಟೀಷರು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದ್ದರು

**5.** ಬ್ರಿಟೀಷ್ ಕಂದಾಯ ನೀತಿಗಳಿಂದಾದ ಪರಿಣಾಮಗಳಾವುವು?

- ಈ ಪದ್ಧತಿಯಿಂದ ಕಂಪನಿಗೆ ನಿರಂತರವಾಗಿ ನಿಗಧಿತ ಕಂದಾಯ ಸಂದಾಯವಾಗತೊಡಗಿತು
- ಕಂಪನಿಯು ಭಾರತೀಯ ರೈತರನ್ನು ಶೋಷಣೆ ಮಾಡಿತು
- ರೈತರು ಭೂ ಮಾಲಿಕತ್ವವನ್ನು ಕಳೆದುಕೊಂಡರು
- ನಿಗಧಿತ ದರಕ್ಕಿಂತ ಹೆಚ್ಚಿನ ಕಂದಾಯವನ್ನು ಅಧಿಕಾರಿಗಳು ಸಂಗ್ರಹಿಸುತ್ತಿದ್ದರು

**6.** ಬ್ರಿಟೀಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿಮಾಡಿ

- ಇಂಗ್ಲೀಷ್ ಶಿಕ್ಷಣವು ಜಾರಿಗೆ ಬಂದಿತು
- ಭಾರತೀಯರಲ್ಲಿ ಪ್ರಜಾಪ್ರಭುತ್ವ, ರಾಷ್ಟ್ರೀಯತೆ ಹಾಗೂ ವಿಮರ್ಶಾತ್ಮಕ ಜ್ಞಾನ ಬೆಳೆಯಿತು
- ಸ್ಥಳೀಯ ಭಾಷೆ ಹಾಗೂ ಸಾಹಿತ್ಯ ಪೋಷಿಸಲ್ಪಟ್ಟಿತು
- ಭಾರತದ ಸ್ವಾತಂತ್ರ ಹೋರಾಟಕ್ಕೆ ಸ್ಪೂರ್ತಿ ಲಭಿಸಿತು

**7.** ರೆಗ್ಯೂಲೇಟಿಂಗ್ ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?

- ಬಂಗಾಳ ಪ್ರೆಸಿಡೆನ್ಸಿಯು ಇತರ ಎಲ್ಲಾ ಪ್ರೆಸಿಡೆನ್ಸಿಗಳ ಮೇಲೆ ನಿಯಂತ್ರಣ ಹೊಂದಿತು
- ಬಂಗಾಳದ ಗವರ್ನರ್ ಹುದ್ದೆಯನ್ನು ಭಾರತದ ಗವರ್ನರ್ ಜನರಲ್ ಎಂದು ಬದಲಾಯಿಸಲಾಯಿತು
- ಕೋಲ್ಕತ್ತಾದಲ್ಲಿ ಸುಪ್ರೀಂಕೋರ್ಟನ್ನು ಸ್ಥಾಪಿಸಲಾಯಿತು
- ಲಾರ್ಡ್ ವಾರನ್ ಹೇಸ್ಟಿಂಗ್ಸ್ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿ ನೇಮಕಗೊಂಡನು

**8.** 1858ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು?

- ಈಸ್ಟ್ ಇಂಡಿಯಾ ಕಂಪನಿಯ ವ್ಯಾಪಾರ ಸನ್ನದನ್ನು ರದ್ದುಪಡಿಸಲಾಯಿತು
- ಭಾರತದ ಆಳ್ವಿಕೆಯನ್ನು ಬ್ರಿಟೀಷ್ ರಾಣಿಯ ನಿಯಂತ್ರಣಕ್ಕೆ ಒಪ್ಪಿಸಲಾಯಿತು
- ಗವರ್ನರ್ ಜನರಲ್ ಹುದ್ದೆಯನ್ನು 'ವೈಸರಾಯ್' ಎಂದು ಬದಲಾಯಿಸಲಾಯಿತು
- ಲಾರ್ಡ್ ಕ್ಯಾನಿಂಗ್ ಪ್ರಥಮ ವೈಸರಾಯ್ ಆಗಿ ನೇಮಿಸಲ್ಪಟ್ಟನು

**9.** 1935ರ ಭಾರತ ಸರ್ಕಾರ ಕಾಯ್ದೆ "ಭಾರತ ಸಂವಿಧಾನದ ಬುನಾದಿ" ಸಮರ್ಥಿಸಿ

- ಭಾರತ ಸಂವಿಧಾನದ ಅನೇಕ ನಿಮಂಧನೆಗಳಿಗೆ ಈ ಕಾಯ್ದೆಯೇ ಆಧಾರವಗಿದೆ
- ಸಂಪೂರ್ಣ ಜವಾಬ್ದಾರಿಯುತ ಸರ್ಕಾರ ರಚನೆಗೆ ಈ ಕಾಯಿದೆ ಅವಕಾಶ ನೀಡಿತು
- ದೇಶಿಯ ಸಂಸ್ಥಾನಗಳು, ಬ್ರಿಟೀಷ್ ಸಂಸ್ಥಾನಗಳನ್ನೊಳಗೊಂಡ ಒಕ್ಕೂಟ ರಚನೆಗೆ ಅವಕಾಶ ನೀಡಿತು
- ಫೆಡರಲ್ ಕೋರ್ಟ್ ಸ್ಥಾಪನೆಗೆ ಅವಕಾಶ ನೀಡಿತು

**10.** 1919ರ ಭಾರತ ಸರ್ಕಾರ ಕಾಯ್ದೆಯ ಪ್ರಮುಖ ಅಂಶಗಳಾವುವು?

- ಕೇಂದ್ರದಲ್ಲಿ ದ್ವಿ ಸದನ ಶಾಸಕಾಂಗ ರಚನೆಗೆ ಅವಕಾಶ ನೀಡಿತು
- ಭಾರತಕ್ಕೆ ಒಬ್ಬ ಹೈ ಕಮೀಷನರ್ ನೇಮಕ ಮಾಡಲು ಸೂಚಿಸಿತು
- ಪ್ರಾಂತೀಯ ಆಯವ್ಯಯವನ್ನು ಕೇಂದ್ರ ಆಯವ್ಯಯದಿಂದ ಪ್ರತ್ಯೇಕಿಸಲಾಯಿತು

- ಮುಸಲ್ಮಾನರು, ಸಿಖ್ಖರು ಹಾಗೂ ಆಂಗ್ಲೋ ಇಂಡಿಯನ್ನರಿಗೆ "ಪ್ರತ್ಯೇಕ ಚುನಾವಣಾ ಮತಗಟ್ಟೆ"ಗಳನ್ನು ನಿಗಧಿ ಪಡಿಸಿತು

## ಅಧ್ಯಾಯ-4
## ಕರ್ನಾಟಕದಲ್ಲಿ ಬ್ರಿಟೀಷ್ ಆಳ್ವಿಕೆಗೆ ಪ್ರತಿರೋಧಗಳು

**I ಖಾಲಿಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. ಮೊದಲನೇ ಆಂಗ್ಲೋ-ಮೈಸೂರು ಯುದ್ದವು **ಹೈದರಾಲಿ** ಮತ್ತು **ಬ್ರಿಟೀಷರ** ನಡುವೆ ನಡೆಯಿತು
2. ಎರಡನೇ ಆಂಗ್ಲೋ-ಮೈಸೂರು ಯುದ್ಧವು **ಮಂಗಳೂರು** ಒಪ್ಪಂದದೊಂದಿಗೆ ಕೊನೆಗೊಂಡಿತು
3. ಕಿತ್ತೂರು ಚೆನ್ನಮ್ಮ **ಶಿವಲಿಂಗಪ್ಪ** ಎಂಬ ಹುಡುಗನನ್ನು ದತ್ತು ಪಡೆದ್ದಿದಳು
4. ಕಿತ್ತೂರು ಸಂಸ್ಥಾನದ ರಾಯಣ್ಣನ ಊರು **ಸಂಗೊಳ್ಳಿ**
5. ಸುರಪುವು ಈಗಿನ **ಯಾದಗಿರಿ** ಜಿಲ್ಲೆಯಲ್ಲಿದೆ
6. ಈಗಿನ ಬಾಗಲಕೋಟೆ ಜಿಲ್ಲೆಯ **ಹಲಗಲಿಯ** ಬೇಡರು ಬ್ರಿಟೀಷರ ವಿರುದ್ದ ದಂಗೆಯೆದ್ದಿದ್ದರು
7. ಅಮರ ಸುಳ್ಯ ಬಂಡಾಯವು ಮೂಲತ **ರೈತರ** ಬಂಡಾಯ

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ಹೈದರಾಲಿ ಹೇಗೆ ಅಧೀಕಾರಕ್ಕೆ ಬಂದನು?
    - ಹೈದರಾಲಿಯು ಮೈಸೂರು ಸೇನೆಗೆ ಸೇರ್ಪಡೆಗೊಂಡನು
    - ದೇವನಹಳ್ಳಿ ಕೋಟೆಯ ಧಾಳಿಯಲ್ಲಿ ಹೈದರಾಲಿಯು ವೀರಾವೇಷದಿಂದ ಹೋರಾಡಿ ಪ್ರಸಿದ್ಧಿಗೆ ಬಂದನು
    - ಆರ್ಕಾಟಿನ ನಿಜಾಮನ ಮೇಲೆ ಯಶಸ್ವಿ ಧಾಳಿ ನಡೆಸಿದನು
    - ಸೈನಿಕರ ಮನಸ್ಸನ್ನು ಗೆದ್ದು ದಳಾವಯಿಗಳನ್ನು ಬದಿಗೊತ್ತಿ ನವಾಬ ಹೈದರಾಲಿಯಾದನು
    - ಕೃಷ್ಣರಾಜ ಒಡೆಯರ ಅಸಮರ್ಥತೆಯು ಹೈದರಾಲಿ ಏಳಿಗೆಗೆ ಬರಲು ಸಹಾಯಕವಾಯಿತು
2. ಎರಡನೇ ಆಂಗ್ಲೋ-ಮೈಸೂರು ಯುದ್ಧದಿಂದ ಉಂಟಾದ ಪರಿಣಾಮಗಳೇನು?
    - ಖಾಯಿಲೆಯಿಂದಾಗಿ ಹೈದರಾಲಿಯು ಮರಣ ಹೊಂದಿದನು
    - ಯುದ್ದವನ್ನು ಮುನ್ನಡೆಸಿದ ಟಿಪ್ಪುವು ಮಂಗಳೂರು ಬಳಿ ಬ್ರಿಟೀಷರನ್ನು ಸೋಲಿಸಿದನು
    - ಬ್ರಿಟೀಷರು ಹಾಗೂ ಟಿಪ್ಪು ಮಂಗಳೂರು ಒಪ್ಪಂದಕ್ಕೆ ಸಹಿ ಹಾಕಿದರು
    - ಬ್ರಿಟೀಷರು ಟಿಪ್ಪುವಿಗೆ ಮಂಗಳೂರನ್ನು ಬಿಟ್ಟುಕೊಟ್ಟರು
3. ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳಾವುವು?
    - ಇದರ ಪರಿಣಾಮವಾಗಿ ತನ್ನ ಅರ್ಧರಾಜ್ಯವನ್ನು ಬ್ರಿಟಿಷರಿಗೆ ನೀಡಬೇಕಾಯಿತು
    - 3 ಕೋಟಿ ರೂಪಾಯಿಗಳನ್ನು ಯುದ್ಧ ಪರಿಹಾರವಾಗಿ ನೀಡಬೇಕಾಯಿತು
    - ಹಣ ಸಂದಾಯವಾಗುವವರೆಗು ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿ ಇಡಬೇಕಾಯಿತು.
    - ಯುದ್ಧಖೈದಿಗಳನ್ನು ಯಾವುದೇ ಷರತ್ತು ಇಲ್ಲದೇ ಬಿಡುಗಡೆಮಾಡಬೇಕಾಯಿತು
    - ಬ್ರಿಟೀಷರು ಶ್ರೀರಂಗಪಟ್ಟಣದಿಂದ ತಮ್ಮ ಸೈನ್ಯವನು ಹಿಂದಕ್ಕೆ ಪಡೆದರು
4. ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧವು ಬ್ರಿಟೀಷರನ್ನು ಮೈಸೂರು ಪ್ರಾಂತ್ಯದಲ್ಲಿ ಭದ್ರಗೊಳಿಸಿತು. ಸಮರ್ಥಿಸಿ
    - ಈ ಯುದ್ಧದಲ್ಲಿ ಬ್ರಿಟೀಷರು ಟಿಪ್ಪುವನ್ನು ಕೊಂದರು
    - ಸಾಮ್ರಾಜ್ಯವನ್ನು ಬ್ರಿಟೀಷರು, ಮರಾಠರು ಹಾಗೂ ನಿಜಾಮರು ಪರಸ್ಪರ ಹಂಚಿಕೊಂಡರು
    - ಸಣ್ಣ ಪ್ರಾಂತ್ಯವನ್ನು ಮೈಸೂರು ಒಡೆಯರಿಗೆ ಹಿಂದರುಗಿಸಲಾಯಿತು
    - ಬ್ರಿಟೀಷರ ಸಹಾಯಕ ಸೈನ್ಯಪದ್ಧತಿಗೆ ಮೈಸೂರು ಒಡೆಯರು ಸಹಿಹಾಕಿದರು

5. ದೋಂಡಿಯ ವಾಘನು ಬ್ರಿಟೀಷರ ವಿರುದ್ಧ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿಶ್ಲೇಷಿಸಿ
   - ದೊಂಡಿಯ ವಾಘನು ತನ್ನದೇ ಆದ ಖಾಸಗಿ ಸೈನ್ಯವನ್ನು ಹೊಂದಿದ್ದನು
   - ಕುಡಲೂರು ಕೋಟೆಯ ಮೇಲೆ ಧಾಳಿ ಮಾಡುವ ಪ್ರಯತ್ನ ಮಾಡಿದನು
   - ಶಿವಮೊಗ್ಗ ಹಾಗೂ ಚಿತ್ರದುರ್ಗ ಕೋಟೆಗಳ ಮೇಲೂ ಧಾಳಿ ಮಾಡಿದನು
   - ಬ್ರಿಟೀಷರ ವಿರುದ್ಧ ಹೊರಾಡಲು ಪಾಳೆಯಗಾರರು ವಾಘನಿಗೆ ಬೆಂಬಲ ನೀಡಿದರು
   - ಫ್ರೆಂಚರ ನೆರವನ್ನು ಸಹ ವಾಘನು ಪಡೆದುಕೊಂಡನು
6. ಸಂಗೊಳ್ಳಿ ರಾಯಣ್ಣನು ಸ್ವಾತಂತ್ರ ಹೋರಾಟದಲ್ಲಿ ಹೋರಾಡಿದ ಕ್ರಮವನ್ನು ವಿವರಿಸಿ.
   - ರಾಯಣ್ಣನು ತನ್ನದೇ ಆದ ಸೈನ್ಯವನ್ನು ಸಂಘಟಿಸಿದನು
   - ರಹಸ್ಯ ಸಭೆಗಳನ್ನು ಆಯೋಜಿಸಿ ಯೋಜನೆ ರೂಪಿಸಿಕೊಂಡರು
   - ಸೈನ್ಯದಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಿದನು
   - ಬ್ರಿಟೀಷರ ಖಜಾನೆ ತಾಲ್ಲೂಕು ಕಛೇರಿಗಳನ್ನು ಲೂಟಿ ಮಾಡಿದನು
7. ಸ್ವಾತಂತ್ರ ಹೋರಾಟದಲ್ಲಿ ಕೊಡಗಿನ ಪ್ರಾಂತ್ಯದ ಪುಟ್ಟಬಸಪ್ಪನ ಪಾತ್ರವನ್ನು ವಿವರಿಸಿ
   - ಪುಟ್ಟಬಸಪ್ಪನು 'ಕಲ್ಯಾಣ ಸ್ವಾಮಿ' ಹಾಗೂ 'ಸ್ವಾಮಿ ಅಪರಂಪರ' ಎಂದೇ ಪರಿಚಿತರಾಗಿದ್ದರು
   - ದಂಗೆಕೋರರನ್ನು ಪುಟ್ಟಬಸಪ್ಪನು ಸಂಘಟಿಸಿದನು
   - ತಂಬಾಕು ಹಾಗೂ ಉಪ್ಪಿನ ಮೇಲಿನ ತೆರಿಗೆಯನ್ನು ಹಿಂತೆಗೆದುಕೊಳ್ಳಲು ಒತ್ತಾಯಿಸಿದನು
   - ಬಳ್ಳಾರಿಯ ಸರ್ಕಾರಿ ಕಛೇರಿಯನ್ನು ಲೂಟಿಮಾಡಿದನು
   - ಅಮಲ್ದಾರನೊಬ್ಬನನ್ನು ಕೊಂದು ಭಂಟ್ವಾಳದ ಖಜಾನೆ ಹಾಗೂ ಸೆರೆಮನೆಯನ್ನು ಲೂಟಿಮಾಡಿದನು
8. ಸುರಪುದ ದಂಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿ
   - 1857ರ ದಂಗೆಯ ಸಮಯದಲ್ಲಿ ವೆಂಕಟಪ್ಪ ನಾಯಕನು ಸುರಪುರ ದಂಗೆಯನ್ನು ಪ್ರಾರಂಭಿಸಿದನು
   - ನಾನಾ ಸಾಹೇಬನ ಪ್ರತಿನಿಧಿಗಳು ವೆಂಕಟಪ್ಪ ನಾಯಕನ ದಂಗೆಯನ್ನು ಬೆಂಬಲಿಸಿದರು
   - ಬ್ರಿಟೀಷರು ವೆಂಕಟಪ್ಪ ನಾಯಕನನ್ನು ಅನುಮಾನದಿಂದ ನೋಡಿದರು
   - ವೆಂಕಟಪ್ಪ ನಾಯಕ ಕುರಿತು ವರದಿ ನೀಡಲು ಕ್ಯಾಂಪ್‌ಬೆಲ್ ಎಂಬ ಅಧಿಕಾರಿಯನ್ನು ನೇಮಿಸಲಾಯಿತು
   - ಹೈದರಾಬಾದಿನ ರೆಸಿಡೆಂಟನಿಗೆ ನೀಡಿದ ವರದಿಯಲ್ಲಿ ಸುರಪುದ ದುರಾಡಳಿತಕ್ಕೆ ವೆಂಕಟಪ್ಪ ಕಾರಣವೆಂದು ತಿಳಿಸಲಾಯಿತು
   - ಬ್ರಿಟೀಷರು ವೆಂಕಟಪ್ಪ ನಾಯಕನನ್ನು ಅಧೀಕಾರದಿಂದ ಕೆಳಗಿಳಿಸಿದರು

## ಅಧ್ಯಾಯ –5
## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. 19ನೇ ಶತಮಾನವನ್ನು **ಭಾರತೀಯ ನವೋದಯ** ಕಾಲವೆಂದು ಕರೆಯಲಾಗಿದೆ
2. ರಾಮ್ ಮೊಹನರಾಯರು **ಸಂವಾದ ಕೌಮುದಿ** ಪತ್ರಿಕೆಯನ್ನು ಪ್ರಾರಂಭಿಸಿದರು
3. ಪ್ರಾರ್ಥನಾ ಸಮಾಜದ ಸ್ಥಾಪಕರು **ಡಾ.ಆತ್ಮಾರಾಂ ಪಾಂಡುರಂಗ**

4. ಯುವ ಬಂಗಾಳಿ ಚಳುವಳಿಯನ್ನು ಪ್ರಾರಂಭಿಸಿದವರು **ಹೆನ್ರಿ ಲೂಯಿಸ್ ವಿವಿಯನ್ ಡಿರೇಜಿಯೋ**
5. ಸ್ವಾಮಿ ವಿವೇಕಾನಂದರ ಗುರುಗಳಾಗಿದ್ದವರು **ಶ್ರೀ ರಾಮಕೃಷ್ಣ ಪರಮಹಂಸರು**
6. ಆಂಗ್ಲೋ–ಓರಿಯಂಟಲ್ ಕಾಲೇಜನ್ನು **ಆಲಿಘಡ** ಎಂಬಲ್ಲಿ ಸ್ಥಾಪಿಸಲಾಗಿದೆ

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

**1.** ಬ್ರಹ್ಮ ಸಮಾಜದ ಬೋಧನೆಗಳಾವುವು
- ಏಕದೇವತಾರಧನೆಗೆ ಪ್ರೋತ್ಸಾಹ
- ಬಾಲ್ಯ ವಿವಾಹಕ್ಕೆ ವಿರೋಧ
- ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ
- ಸತಿ ಪದ್ಧತಿಗೆ ವಿರೋಧ

**2.** ದಯಾನಂದ ಸರಸ್ವತಿಯವರ 'ವೇದಗಳಿಗೆ ಹಿಂದಿರುಗಿ' ಎನ್ನುವ ಘೋಷಣೆಯನ್ನು ವಿಶ್ಲೇಷಿಸಿ
ವೇದಗಳು ಸತ್ಯ ಮತ್ತು ಜ್ಞಾನದ ಪ್ರತೀಕ ಅದ್ದರಿಂದ ಸ್ವಾಮಿ ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂದಿರುಗಿ' ಎಂಬ ಘೋಷಣೆಯನ್ನು ನೀಡಿದರು

**3.** ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ
- ಶೂದ್ರರು ಹಾಗೂ ಮಹಿಳೆಯರಿಗೆ ಶಾಲೆಗಳ ಸ್ಥಾಪನೆ
- ಸಮಾನತೆಯ ಹಕ್ಕಿಗಾಗಿ ಪ್ರೋತ್ಸಾಹ
- ಜಾತಿ ಪದ್ಧತಿಯನ್ನು ವಿರೋಧಿಸುವುದು
- ಮಾನವ ಹಕ್ಕುಗಳ ನಿರಾಕರಣೆಯನ್ನು ಖಂಡಿಸುವುದು

**4.** ಆಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ
- ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡುವುದು
- ಬಹುಪತ್ನಿತ್ವಕ್ಕೆ ವಿರೋಧ
- ಮುಸ್ಲಿಂ ಸಮಾಜದಲ್ಲಿ ಇಂಗ್ಲೀಷ್ ಶಿಕ್ಷಣಕ್ಕೆ ಪ್ರೋತ್ಸಾಹಿಸುವುದು
- ಪಾಶ್ಚಿಮಾತ್ಯ ವಿಜ್ಞಾನ ಹಾಗೂ ಸಂಸ್ಕೃತಿಯನ್ನು ಪ್ರಸಾರ ಮಾಡುವುದು

**5.** ರಾಮಕೃಷ್ಣ ಮಿಷನ್ನಿನ ದೃಷ್ಟಿಕೋನವನ್ನು ವಿವರಿಸಿ
- ರಾಮಕೃಷ್ಣ ಪರಮಹಂಸರ ಬೋಧನೆಗಳ ಪ್ರಸಾರ
- ಭಾರತೀಯ ತತ್ವಜ್ಞಾನದ ಮಹತ್ವವನ್ನು ತಿಳಿಸುವುದು
- ಜಾತಿರಹಿತ ಸಮಾಜದ ಸ್ಥಾಪನೆಯನ್ನು ಪ್ರೋತ್ಸಾಹಿಸುವುದು
- ಬಡತನ, ಶೋಷಣೆ, ಅನಕ್ಷರತೆಯ ನಿರ್ಮೂಲನೆ ಮಾಡುವುದು

**6.** ಸ್ವಾಮಿ ವಿವೇಕಾನಂದರು ಯುವಶಕ್ತಿಯ ಪ್ರೇರಕರಾಗಿದ್ದರು ಹೇಗೆ ಎಂಬುದನ್ನು ವಿವರಿಸಿ
- ಇವರು ಯುವಕರಿಗೆ "ಏಳಿ,ಎದ್ದೇಳಿ,ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂದು ಕರೆ ನೀಡಿದರು
- ವ್ಯಕ್ತಿಯಲ್ಲಿರುವ ಸಾಮರ್ಥ್ಯದ ಪೂರ್ಣ ಬಳಕೆಯನ್ನು ಪ್ರೇರೇಪಿಸಿದರು
- ಸಮಾಜ ಸೇವೆಯ ಮಹತ್ವವನ್ನು ತಿಳಿಸಿದರು
- ಭಾರತದ ಸಂಸ್ಕೃತಿಯ ಮಹತ್ವವನ್ನು ಚಿಕಾಗೊ ವಿಶ್ವಧರ್ಮ ಸಮ್ಮೇಳನದಲ್ಲಿ ವಿಶ್ವಕ್ಕೆ ಸಾರಿದರು

**7.** ಅನಿಬೆಸೆಂಟರ ಸುಧಾರಣಾ ಕ್ರಮಗಳಾವುವು?
- ಸಮಾನತೆ ಹಾಗೂ ಸಹೋದರತೆಯನ್ನು ವೃದ್ಧಿಸುವುದು
- ವಿಶ್ವಭಾತೃತ್ವದ ನಿರ್ಮಾಣ
- ಮಾನವನ ಸುಪ್ತಶಕ್ತಿಗಳನ್ನು ಪತ್ತೆ ಹಚ್ಚುವುದು
- ಸ್ವಾತಂತ್ರ ಚಳುವಳಿಯನ್ನು ಬೆಂಬಲಿಸುವುದು

**8.** ನಾರಯಣ ಗುರು ಧರ್ಮಪರಿಪಾಲನ ಯೋಗಂ ಸಂಘಟನೆಯ ಕೊಡುಗೆಗಳನ್ನು ತಿಳಿಸಿ

- ಹಿಂದುಳಿದ ಹಾಗೂ ಶೋಷಿತ ಸಮುದಾಯಗಳನ್ನು ಬಲಪಡಿಸುವುದು
- ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಹಾಗೂ ಒಂದೇ ದೇವರು
- ಶಿಕ್ಷಣವನ್ನು ಪ್ರೋತ್ಸಾಹಿಸುವುದು
- ಹಿಂದುಳಿದ ವರ್ಗದವರಿಗಾಗಿ ದೇವಾಲಯಗಳ ನಿರ್ಮಾಣ
- 'ವೈಕಂ' ಎಂಬ ಸತ್ಯಾಗ್ರಹ ನಡೆಸುವುದು

**9.** ಪೆರಿಯಾರ್ ಚಳವಳಿಯ ಮುಖ್ಯಾಂಶಗಳನ್ನು ಪಟ್ಟಿಮಾಡಿ

- ಆರ್ಯರು ಬ್ರಾಹ್ಮಣರ ಹೆಸರಿನಲ್ಲಿನ ಜನಾಂಗೀಯ ತಾರತಮ್ಯವನ್ನು ವಿರೋಧಿಸುವುದು
- ಸಂಸ್ಕೃತ ಸಾಹಿತ್ಯ ಹಾಗೂ ಭಾಷೆಗೆ ವಿರೋಧ
- ಜಾತಿ, ಲಿಂಗಾಧಾರಿತ ತಾರತಮ್ಯಕ್ಕೆ ವಿರೋಧ ಹಾಗೂ ಸಮಾನತೆಗೆ ಆದ್ಯತೆ ನೀಡುವುದು
- ಜಾತಿ. ಲಿಂಗ ಹಾಗೂ ಧಾರ್ಮಿಕ ತಾರತಮ್ಯವನ್ನು ವಿರೋಧಿಸುವುದು

**10.** ಪ್ರಾರ್ಥನಾ ಸಮಾಜದ ಉದ್ಧೇಶಗಳೇನು?

- ಇದು ವಿಧವಾ ವಿವಾಹವನ್ನು ಪ್ರೋತ್ಸಾಹಿಸಿತು
- ಸ್ತ್ರೀ ಶಿಕ್ಷಣಕ್ಕೆ ಆದ್ಯತೆ ನೀಡಿತು
- ಅಂತರ್ಜಾತಿಯ ವಿವಾಹವನ್ನು ಪ್ರೋತ್ಸಾಹಿಸಿತು
- ಸಹ ಭೋಜನವನ್ನು ಪ್ರೇರೇಪಿಸಿತು

**11.** ಭಾರತೀಯ ನವೋದಯದ ಜನಕ ಎಂದು ಯಾರನ್ನು ಕರೆಯಲಾಗುತ್ತದೆ? ಏಕೆ?

ರಾಮಮೋಹನ ರಾಯರನ್ನು ಭಾರತೀಯ ನವೋದಯದ ಜನಕ ಎಂದು ಕರೆಯಲಾಗುತ್ತದೆ. ಇವರು ಭಾರತದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣಾ ಚಳುವಳಿಯನ್ನು ಆರಂಭಿಸಿದ ಮೊದಲ ವ್ಯಕ್ತಿಯಾಗಿರುವುದರಿಂದ ಹಾಗೆ ಕರೆಯಲಾಗುತ್ತದೆ

## ಅಧ್ಯಾಯ –6
## ಭಾರತದ ಪ್ರಥಮ ಸ್ವಾತಂತ್ರ ಸಂಗ್ರಾಮ (1857)

**I ಖಾಲಿ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ**

1. 1857ರ ದಂಗೆಯನ್ನು ಬ್ರಿಟಿಷ್ ಇತಿಹಾಸಕಾರರು **ಸಿಪಾಯಿದಂಗೆ** ಎಂದು ಕರೆದಿದ್ದಾರೆ
2. ಡಾಲ್‌ಹೌಸಿಯು ಜಾರಿಗೆ ತಂದ ನೀತಿ **ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ**
3. 1857ರ ದಂಗೆಯ ಸಮಯದಲ್ಲಿ ಬ್ರಿಟಿಷ್ ಅಧಿಕಾರಿಯನ್ನು ಕೊಂದವನು **ಮಂಗಲ ಪಾಂಡೆ**
4. ಝಾನ್ಸಿ ರಾಣಿಯು ಬ್ರಿಟಿಷರ ವಿರುದ್ದದ ಯುದ್ಧದಲ್ಲಿ **ಗ್ವಾಲೀಯರ**ನ್ನು ವಶಕ್ಕೆ ಪಡೆದಳು

**II ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದಾದ ಪರಿಣಾಮಗಳಾವುವು? ವಿಶ್ಲೇಷಿಸಿ
    - ದೇಶಿಯ ಸಂಸ್ಥಾನಗಳು ತಮ್ಮ ಅಸ್ಥಿತ್ವಗಳನ್ನು ಕಳೆದುಕೊಂಡವು
    - ಸತಾರ, ಜೈಪುರ ಹಾಗೂ ಝಾನ್ಸಿಗಳು ಬ್ರಿಟಿಷರ ವಶವಾದವು
    - ತಂಜಾವೂರು ಹಾಗೂ ಕರ್ನಾಟಿಕ್ ನವಾಬರಿಗಿದ್ದ ರಾಜಪದವಿಗಳು ರದ್ಧಾದವು
    - ಮೊಘಲ್ ಚಕ್ರವರ್ತಿಯನ್ನು ಪದಚ್ಯುತಗೊಳಿಸಿದರು
    - ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು
    - 1857ರ ದಂಗೆಗೆ ಪ್ರೇರಣೆಯನ್ನು ನೀಡಿತು

2. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ
    - ಇಂಗ್ಲೇಂಡಿನ ಕೈಗಾರಿಕಾ ಕ್ರಾಂತಿಯಿಂದ ಭಾರತದ ಕೈಗಾರಿಕೆಗಳು ನಶಿಸಿದವು
    - ಭಾರತವು ಇಂಗ್ಲೇಂಡಿಗೆ ಕಚ್ಚಾ ಸಾಮಾಗ್ರಿಗಳನ್ನು ಪೂರೈಸುವ ದೇಶವಾಯಿತು
    - ಇಂಗ್ಲೇಂಡಿನ ಸಿದ್ಧವಸ್ತುಗಳನ್ನು ಮಾರುವ ಮಾರುಕಟ್ಟೆಯಾಗಿ ಭಾರತವನ್ನು ಬಳಸಿಕೊಂಡರು
    - ಲಕ್ಷಾಂತರ ಜನರು ನಿರುದ್ಯೋಗಿಗಳಾದರು
    - ಭಾರತೀಯ ಸರಕಿನ ಮೇಲೆ ದುಬಾರಿ ಸುಂಕಗಳನ್ನು ಹೇರಲಾಯಿತು
    - ಇನಾಂ ಕಮೀಷನ್ ಮೂಲಕ ಕೊಡುಗೆ ಭೂಮಿಗಳನ್ನು ಹಿಂಪಡೆದರು
    - ಜಮಿನ್ದಾರರು ರೈತರನ್ನು ಶೋಷಣೆ ಮಾಡಿದರು
3. 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವುವು?
    - ಸೈನಿಕರನ್ನು ಸಾಗರದಾಚೆಗಿನ ಸೇವೆಗೆ ಒತ್ತಾಯ ಪಡಿಸಲಾಯಿತು
    - ರಾಯಲ್ ಎನ್‌ಫೀಲ್ಡ್ ಬಂದೂಕಿನ ತುಪಾಕಿಗಳಿಗೆ ಹಂದಿ ಮತ್ತು ದನದ ಕೊಬ್ಬನ್ನು ಲೇಪಿಸಲಾಗಿತ್ತು
4. ಪ್ರಥಮ ಸ್ವಾತಂತ್ರ ಸಂಗ್ರಾಮಕ್ಕೆ ತತ್‌ಕ್ಷಣದ ಕಾರಣಗಳಾವುವು?
   ಬ್ರಿಟಿಷರು ಹೊಸ ಮಾದರಿಯ ರಾಯಲ್ ಎನ್‌ಫೀಲ್ಡ್ ಬಂದೂಕುಗಳನ್ನು ಪರಿಚಯಿಸಿದರು. ಈ ಬಂದೂಕಿನ ತುಪಾಕಿಗಳಿಗೆ ಹಂದಿ ಮತ್ತು ದನದ ಕೊಬ್ಬನ್ನು ಲೇಪಿಸಲಾಗಿತ್ತು, ಇದನ್ನು ಬಳಸಲು ಸೈನಿಕರಿಗೆ ಒತ್ತಾಯ ಪಡಿಸಿದ್ದರಿಂದ ದಂಗೆ ಸ್ಫೋಟಗೊಂಡಿತು.
5. 1857 ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿಮಾಡಿ
    - ಇದು ದೇಶದಾದ್ಯಂತ ವ್ಯಾಪಿಸಿರಲಿಲ್ಲ
    - ಕೆಲವರ ವೈಯುಕ್ತಿಕ ಕಾರಣಗಳ ಈಡೇರಿಕೆಗಾಗಿ ದಂಗೆ ಸಂಭವಿಸಿತು
    - ಸಂಘಟನೆಯ ಕೊರತೆಯು ಹೆಚ್ಚಾಗಿತ್ತು
    - ಭಾರತೀಯ ಸೈನಿಕರಲ್ಲಿ ಒಗ್ಗಟ್ಟಿನ ಕೊರತೆ ಇತ್ತು
    - ದಂಗೆಯು ಸೂಕ್ತ ನಿರ್ದೇಶನ ಹಾಗೂ ನಾಯಕತ್ವದ ಕೊರತೆಯನ್ನು ಹೊಂದಿತ್ತು
    - ಬ್ರಿಟಿಷರು ಆಧುನಿಕ ಶಸ್ತ್ರಾಸ್ತ್ರಗಳನ್ನು ಪರಿಣಾಮಕಾರಿಯಾಗಿ ಬಳಸಿದರು
    - ದೇಶಿಯ ರಾಜರು ಬ್ರಿಟಿಷರಿಗೆ ನಿಷ್ಠರಾಗಿ ಉಳಿದುಕೊಂಡರು
    - ಭಾರತೀಯ ಸಿಪಾಯಿಗಳು ಆಧುನಿಕ ಶಸ್ತ್ರಾಸ್ತ್ರಗಳ ಕೊರತೆ ಹೊಂದಿದ್ದರು
6. 1857 ರ ದಂಗೆಯ ಪರಿಣಾಮಗಳನ್ನು ಪಟ್ಟಿಮಾಡಿ
    - ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯು ಅಂತ್ಯಗೊಂಡಿತು
    - ಭಾರತದ ಆಳ್ವಿಕೆಯು ಬ್ರಿಟ್ಟನ್ನಿನ ರಾಣಿಯ ನಿಯಂತ್ರಣಕ್ಕೆ ಒಳಪಟ್ಟಿತು
    - ರಾಣಿಯು ಭಾರತದ ಆಡಳಿತದ ಜವಾಬ್ದಾರಿಯನ್ನು ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ವಹಿಸಿದಳು
    - 1858 ರಲ್ಲಿ ಪ್ರಸಿದ್ದ “ವಿಕ್ಟೋರಿಯಾ ರಾಣಿಯ ಘೋಷಣೆ”ಗಳು ಜಾರಿಗೆ ಬಂದವು
    - ಮುಂದಿನ ಸ್ವಾತಂತ್ರಹೋರಾಟಕ್ಕೆ ಹೊಸ ಸ್ಫೂರ್ತಿಯನ್ನು ನೀಡಿತು
    - ಭಾರತೀಯರ ಬೆಂಬಲವಿಲ್ಲದೆ ಶಾಂತಿಯುತ ಆಳ್ವಿಕೆ ಸಾದ್ಯವಿಲ್ಲವೆಂದು ಬ್ರಿಟೀಷರು ಅರಿತರು
    - ರಾಣಿಯು ‘ದತ್ತು ಮಕ್ಕಳಿಗೆ ಉತ್ತರಾಧಿಕಾರವಿಲ್ಲ’ ನೀತಿಯನ್ನು ರದ್ದುಪಡಿಸಿದಳು
7. ’1858 ರ ಬ್ರಿಟನ್ನಿನ ರಾಣಿಯ ಘೋಷಣೆ’ಯಲ್ಲಿದ್ದ ಅಂಶಗಳಾವುವು?
    - ಈಸ್ಟ್ ಇಂಡಿಯಾ ಕಂಪನಿ ಭಾರತೀಯ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳನ್ನು ಮುಂದುವರಿಸಲಾಯಿತು
    - ಭಾರತೀಯರಿಗೆ ಸ್ಥಿರ ಹಾಗೂ ಸುಭದ್ರ ಸರ್ಕಾರದ ಭರವಸೆಯನ್ನು ನೀಡಲಾಯಿತು

- ಕಾನೂನಿನನ್ವಯ ಎಲ್ಲರಿಗೂ ಸಮಾನತೆ ನೀಡಲಾಯಿತು
- ಧಾರ್ಮಿಕ ಸಾಮರಸ್ಯ ಸ್ಥಾಪಿಸುವ ಭರವಸೆ ನೀಡಲಾಯಿತು
- ಭಾರತೀಯರ ಧಾರ್ಮಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡದಿರುವ ಭರವಸೆ ನೀಡಿದರು
- 'ದತ್ತು ಮಕ್ಕಳಿಗೆ ಉತ್ತರಾಧಿಕಾರವಿಲ್ಲ' ನೀತಿಯನ್ನು ರದ್ದುಪಡಿಸಲಾಯಿತು.

8. 1857ರ ದಂಗೆಯ ಕಾರಣಗಳನ್ನು ಪಟ್ಟಿಮಾಡಿ. ಒಂದನ್ನು ವಿವರಿಸಿ
    - ರಾಜಕೀಯ ಕಾರಣಗಳು
    - ಆರ್ಥಿಕ ಕಾರಣಗಳು
    - ಸಾಮಾಜಿಕ ಕಾರಣಗಳು
    - ಆಡಳಿತಾತ್ಮಕ ಕಾರಣಗಳು
    - ಸೈನಿಕ ಕಾರಣಗಳು
    - ತತ್‌ಕ್ಷಣದ ಕಾರಣಗಳು

# ಅಧ್ಯಾಯ–7
# ಸ್ವಾತಂತ್ರ ಹೋರಾಟ

**I ಖಾಲಿ ಜಾಗವನ್ನು ಸರಿಯಾದ ಉತ್ತರಗಳಿಂದ ಭರ್ತಿಮಾಡಿ**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸನ್ನು **1885** ರಲ್ಲಿ ಸ್ಥಾಪಿಸಲಾಯಿತು
2. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ತಿಳಿಸಿದವರು **ದಾದಾಬಾಯಿ ನವರೋಜಿ**
3. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು **ಬಾಲಗಂಗಾಧರ ತಿಲಕ್**ರವರು ಘೋಷಿಸಿದರು
4. ಬಾಲಗಂಗಾಧರ ತಿಲಕರು ಮರಾಠಿ ಭಾಷೆಯಲ್ಲಿ **ಕೇಸರಿ** ಪತ್ರಿಕೆಯನ್ನು ಪ್ರಕಟಿಸಿದರು
5. ಅಭಿನವ ಭಾರತ ಎಂಬ ರಹಸ್ಯ ಸಂಘಟನೆಯನ್ನು **ಕ್ರಾಂತಿಕಾರಿಗಳು** ಹೊಂದಿದ್ದರು

**II ಖಾಲಿ ಜಾಗವನ್ನು ಸರಿಯಾದ ಆಯ್ಕೆಯ ಉತ್ತರಗಳಿಂದ ಭರ್ತಿಮಾಡಿ**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪಕರು..................
   ಎ)ಮಹಾತ್ಮ ಗಾಂಧೀಜಿ **ಬಿ)ಎ.ಓ.ಹ್ಯೂಮ್** ಸಿ)ಬಾಲಗಂಗಾಧರ ತಿಲಕ್ ಡಿ)ಗೋಪಾಲಕೃಷ್ಣ ಗೋಖಲೆ
2. "ಮರಾಠ" ಪತ್ರಿಕೆಯನ್ನು ಪ್ರಕಟಿಸಿದವರು.................
   ಎ)ನೆಹರೂ ಬಿ)ರಾಸ್ ಬಿಹಾರಿ ಬೋಸ್ **ಸಿ)ಬಾಲಗಂಗಾಧರ ತಿಲಕ್** ಡಿ)ವಿ.ಡಿ.ಸಾವರ್ಕರ್
3. ಮುಸ್ಲೀಂ ಲೀಗ್............ರಲ್ಲಿ ಹುಟ್ಟಿಕೊಂಡಿತು
   ಎ) 1905 **ಬಿ) 1906** ಸಿ) 1907 ಡಿ) 1909
4. ಬಂಗಾಳದ ವಿಭಜನೆಯನ್ನು ರೂಪಿಸಿದ ವೈಸರಾಯ್...............
   ಎ) ಲಾರ್ಡ್ ಡಾಲ್‌ಹೌಸಿ ಬಿ) ಲಾರ್ಡ್ ವೆಲ್ಲೆಸ್ಲಿ ಸಿ) ಲಾರ್ಡ್ ಕ್ಯಾನಿಂಗ್ **ಡಿ) ಲಾರ್ಡ್ ಕರ್ಜನ್**

**III ಈ ಪ್ರಶ್ನೆಗಳಿಗೆ ಉತ್ತರಿಸಿ**

1. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ಥಾಪನೆಗೂ ಮೊದಲು ಇದ್ದ ಸಂಘಟನೆಗಳು ಯಾವುವು?
    - ದಿ ಹಿಂದೂ ಮೇಳ
    - ದಿ ಈಸ್ಟ್ ಇಂಡಿಯಾ ಅಸೋಷಿಯೆಷನ್
    - ಪೂನಾ ಸಾರ್ವಜನಿಕ ಸಭಾ
    - ದಿ ಇಂಡಿಯನ್ ಅಸೋಷಿಯೇಷನ್
2. ಮಂದಗಾಮಿಗಳೆಂದರೇನು? ಅವರ ಪ್ರಮುಖ ಬೇಡಿಕೆಗಳೇನು?

ಭಾರತದ ಸ್ವಾತಂತ್ರ ಹೋರಾಟದಲ್ಲಿ ಸಂವಿಧಾನಾತ್ಮಕ ಮಾರ್ಗವನ್ನು ಅನುಸರಿಸಿದ ಹೋರಾಟಗಾರರೇ ಮಂದಗಾಮಿಗಳು. ಎಂ.ಜಿ. ರಾನಡೆ. ದಾದಾಬಾಯಿ ನವರೋಜಿ. ಗೋಪಾಲಕೃಷ್ಣ ಗೋಖಲೆ. ಸುರೇಂದ್ರನಾಥ ಬ್ಯಾನರ್ಜಿಯವರು ಪ್ರಮುಖ ಮಂದಗಾಮಿ ನಾಯಕರುಗಳಾಗಿದ್ಧಾರೆ

ಇವರ ಬೇಡಿಕೆಗಳೇನೆಂದರೆ

- ಜನರ ಸಮಸ್ಯೆಗಳನ್ನು ಚರ್ಚಿಸಿ ಸರ್ಕಾರಕ್ಕೆ ಮನವಿ ಸಲ್ಲಿಸುವುದು
- ದೇಶದ ಕೈಗಾರಿಕೆಗಳ ಅಭಿವೃದ್ಧಿ
- ಸೈನಿಕ ವೆಚ್ಚ ಕಡಿಮೆ ಮಾಡುವುದು
- ಜನರಿಗೆ ಉತ್ತಮ ಶಿಕ್ಷಣ ದೊರಕಿಸುವುದು
- ಬಡತನದ ಬಗ್ಗೆ ಅಧ್ಯಯನ ನಡೆಸಲು ಒತ್ತಾಯಿಸುವುದು
- ಜನರಿಗೆ ರಾಜಕೀಯ ಶಿಕ್ಷಣ ನೀಡುವುದು
- ಸಂವಿಧಾನತ್ಮಕ ಚೌಕಟ್ಟಿನಲ್ಲಿ ಹೊರಾಟ ನಡೆಸುವುದು

3. ಸಂಪತ್ತಿನ ಸೋರಿಕೆ ಸಿದ್ಧಾಂತವನ್ನು ವಿವರಿಸಿ

ಭಾರತದ ಸಂಪತ್ತು ಇಂಗ್ಲೇಂಡಿಗೆ ಹರಿದು ಹೋದ ವಿಧಾನವನ್ನು ವಿವರಿಸುವ ಸಿದ್ಧಾಂತವೇ ಸಂಪತ್ತಿನ ಪ್ರವಾಹ ಸಿದ್ಧಾಂತ. ಇದನ್ನು ಮಂಡಿಸಿದವರು ದಾದಾಬಾಯಿ ನವರೋಜಿ

4. ಭಾರತದ ಸ್ವಾತಂತ್ರ ಹೋರಾಟದಲ್ಲಿನ ಕ್ರಾಂತಿಕಾರಿಗಳನ್ನು ಹೆಸರಿಸಿ

- ಭಗತ್ ಸಿಂಗ್
- ಚಂದ್ರಶೇಖರ್ ಆಜಾದ್
- ವಿ.ಡಿ. ಸಾವರ್ಕರ್
- ರಾಸ್ ಬಿಹಾರಿ ಬೋಸ್

5. ಭಾರತದ ಸ್ವಾತಂತ್ರ ಹೋರಾಟದಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ

- ತೀವ್ರಗಾಮಿಗಳ ಪ್ರಮುಖ ನಾಯಕ ಬಾಲಗಂಗಾಧರ ತಿಲಕ್
- ಬಂಗಾಳದ ವಿಭಜನೆಯನ್ನು ವಿರೋಧಿಸಿದರು
- ಬಂಗಾಳದ ವಿಭಜನೆಯ ವಿರುದ್ದ 'ಸ್ವದೇಶಿ ಚಳುವಳಿ'ಯನ್ನು ಆರಂಭಿಸಿದರು
- "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು,ನಾನು ಅದನ್ನು ಪಡೆದೇ ತೀರುತ್ತೇನೆ" ಎಂದು ಘೋಷಿಸಿದರು
- ಅನಿಬೆಸೆಂಟ್‌ರ ಜೊತೆ ಸೇರಿ 'ಹೊಂರೂಲ್ ಲೀಗ್ ಸ್ಥಾಪಿಸಿದರು
- ಶಿವಾಜಿ ಜಯಂತಿ ಹಾಗೂ ಗಣೇಶ ಉತ್ಸವಗಳನ್ನು ಸ್ವಾತಂತ್ರ ಚಳುವಳಿಯ ಅಸ್ತ್ರಗಳನ್ನಾಗಿ ಬಳಸಿದರು
- 'ಮರಾಠ' ಹಾಗೂ 'ಕೇಸರಿ' ಪತ್ರಿಕೆಗಳ ಮೂಲಕ ದೇಶಪ್ರೇಮ ಬೆಳೆಸಿದರು
- ಪೂರ್ಣಸ್ವರಾಜ್ಯ ಪಡೆಯುವುದು ತೀವ್ರಗಾಮಿಗಳ ಗುರಿಯೆಂದರು
- ಬ್ರಿಟೀಷರಿಂದ ಬಂಧನಕ್ಕೆ ಒಳಗಾದರು

6. ಬಂಗಾಳದ ವಿಭಜನೆಯನ್ನು ಹಿಂಪಡೆಯಲು ಕಾರಣವೇನು?

- ಭಾರತೀಯರ ತೀವ್ರ ಪ್ರತಿಭಟನೆ
- ಬ್ರಿಟನ್ ರಾಜಕುಮಾರನ ಭಾರತ ಭೇಟಿಯ ಹಿನ್ನಲೆ
- ಭಾರತೀಯರು ಯುರೋಪಿಯನ್ ವಸ್ತುಗಳನ್ನು ಬಹಿಷ್ಕಾರ ಮಾಡಿದ್ದು

# ಅಧ್ಯಾಯ-8
# ಗಾಂಧಿಯುಗ ಹಾಗೂ ರಾಷ್ಟ್ರೀಯ ಹೋರಾಟ

**I ಖಾಲಿ ಜಾಗವನ್ನು ಸರಿಯಾದ ಉತ್ತರಗಳಿಂದ ಭರ್ತಿಮಾಡಿ**

1. ಗಾಂಧೀಜಿಯವರು **02ನೇ ಅಕ್ಟೋಬರ್ 1869** ರಲ್ಲಿ ಜನಿಸಿದರು
2. ಜಲಿಯನ್ ವಾಲಾಬಾಗ್ ಹತ್ಯಾಕಾಂಡವು **ರೌಲತ್** ಕಾಯ್ದೆಗೆ ವಿರುದ್ದ ನಡೆದ ಹೋರಾಟದ ಪರಿಣಾಮ
3. ಆಲಿ ಸಹೋದರರು ನಡೆಸಿದ ಚಳುವಳಿ **ಖಿಲಾಫತ್** ಚಳುವಳಿ
4. ಮುಸ್ಲಿಮರಿಗಾಗಿ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು **ಮಹಮ್ಮದ್ ಆಲಿ ಜಿನ್ನಾ** ರವರು ಮಂಡಿಸಿದರು
5. 1929ರ ಲಾಹೋರನಲ್ಲಿ ನಡೆದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ ಅಧಿವೇಶನದ ಆಧ್ಯಕ್ಷರಾಗಿದ್ದವರು **ಜವಾಹರ್ ಲಾಲ್ ನೆಹರು**
6. ಮಹದ್ ಹಾಗೂ ಕಾಲಾರಾಂ ದೇವಾಲಯ ಚಳುವಳಿಯನ್ನು ರೂಪಿಸಿದವರು **ಡಾ.ಬಿ.ಆರ್.ಅಂಬೇಡ್ಕರ್**
7. ಭಾರತೀಯ ರಾಷ್ಟ್ರೀಯ ಸೇನೆಯ ಝಾನ್ಸಿ ರೆಜಿಮೆಂಟಿನ ನೇತೃತ್ವವನ್ನು **ಕ್ಯಾಪ್ಟನ್ ಲಕ್ಷ್ಮಿ** ರವರು ವಹಿಸಿದ್ಧರು
8. ಉಪ್ಪಿನ ಸತ್ಯಾಗ್ರಹವನ್ನು ಗಾಂಧೀಜಿಯವರು **ದಂಡಿ** ಎಂಬಲ್ಲಿ ನಡೆಸಿದರು
9. ಕ್ವಿಟ್ ಇಂಡಿಯಾ ಚಳುವಳಿಯು **1942** ರಲ್ಲಿ ನಡೆಯಿತು

**II ಖಾಲಿ ಜಾಗವನ್ನು ಸರಿಯಾದ ಆಯ್ಕೆಯ ಉತ್ತರಗಳಿಂದ ಭರ್ತಿಮಾಡಿ**

1. ಮೊದಲನೇ ದುಂಡುಮೇಜಿನ ಪರಿಷತ್ ಸಮಾವೇಶ ಜರುಗಿದ ವರ್ಷ............
   **ಎ) 1930** ಬಿ) 1931 ಸಿ) 1932 ಡಿ) 1935
2. ಸ್ವರಾಜ್ಯ ಪಕ್ಷ ಸ್ಥಾಪಿಸಿದ ವರ್ಷ............
   ಎ) 1924 **ಬಿ) 1922** ಸಿ) 1929 ಡಿ) 1906
3. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಹರಿಪುರ ಅಧೀವೇಶನದ ಅಧ್ಯಕ್ಷರಾಗಿದ್ಧವರು.................
   ಎ)ಸರ್ದಾರ್ ಪಟೇಲ್ ಬಿ)ಡಾ.ಬಿ.ಆರ್.ಅಂಬೇಡ್ಕರ್ ಸಿ)ಬಾಲಗಂಗಾಧರ ತಿಲಕ್ **ಡಿ)ಸುಭಾಷ್ ಚಂದ್ರಬೋಸ್**
4. ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾಗಿದ್ಧವರು.............
   ಎ)ಭಗತ್ ಸಿಂಗ್ ಬಿ)ಚಂದ್ರಶೇಖರ್ ಆಜಾದ್ ಸಿ)ಅಬುಲ್ ಕಲಾಂ ಅಜಾದ್ **ಡಿ)ಸರ್ದಾರ್ ವಲ್ಲಭಬಾಯಿ ಪಟೇಲ್**

**III ಮೂರು ಅಂಕದ ಪ್ರಶ್ನೋತ್ತರಗಳು.**

1. ಗಾಂಧೀಜಿಯವರ ಹೋರಾಟದ ಅಂತ ಸತ್ವದ ಸಾಧನಗಳಾವುವು?
   - ಸತ್ಯಾಗ್ರಹ
   - ಅಹಿಂಸೆ
   - ಹಿಂದೂ-ಮುಸ್ಲಿಂ ಏಕತೆ
2. ಅಸಹಕಾರ ಚಳುವಳಿಯ ಕಾರ್ಯಕ್ರಮಗಳನ್ನು ಪಟ್ಟಿಮಾಡಿ
   - ಈ ಚಳುವಳಿಯು 1920 ರಲ್ಲಿ ಆರಂಭಗೊಂಡಿತು
   - ಗಾಂಧೀಜಿಯವರು ಇದರ ನಾಯಕತ್ವ ವಹಿಸಿದ್ದರು
   - ರೌಲತ್ ಕಾಯ್ದೆ ಹಾಗೂ ಜಲಿಯನವಾಲಾಬಾಗ್ ಹತ್ಯಾಕಾಂಡ ವಿರೋಧಿಸಿ ಚಳುವಳಿ ಜರುಗಿತು
   - ಚಳುವಳಿಯ ಅಂಗವಾಗಿ ವಿಧ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು
   - ವಕೀಲರು ನ್ಯಾಯಲಯವನ್ನು ಬಹಿಷ್ಕರಿಸಿದರು.
   - ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಪ್ರಮುಖರು ಹಿಂದಿರುಗಿಸಿದರು
   - ಮೊತಿಲಾಲ್ ನೆಹರೂ. ಸಿ,ಆರ್,ದಾಸ್ ತಮ್ಮ ವಕೀಲಿ ವೃತ್ತಿ ತ್ಯಜಿಸಿದರು.
   - ಬ್ರಿಟಿಷ್ ರಾಜಕುಮಾರನ ಭೇಟಿ ವಿರೊಧಿಸಿ ಹರತಾಳಗಳು ಜರುಗಿದವು
   - ಗಾಂಧೀಜಿ ಸೇರಿದಂತೆ ಪ್ರಮುಖರನ್ನು ಬಂಧಿಸಲಾಯಿತು

- ಚೌರಿಚೌರದಲ್ಲಿ ಹಿಂಸಾಕೃತ್ಯಗಳು ಜರುಗಿದವು
- ಚೌರಿಚೌರದ ಘಟನೆಯಿಂದ ಮನನೊಂದ ಗಾಂಧೀಜಿಯವರು ಚಳುವಳಿಯನ್ನು ಸ್ಥಗಿತಗೊಳಿಸಿದರು

3. ಚೌರಿ–ಚೌರ ಘಟನೆಯನ್ನು ವಿವರಿಸಿ
1922 ರಲ್ಲಿ ಉತ್ತರ ಪ್ರದೇಶದ ಚೌರಿ–ಚೌರ ಎಂಬಲ್ಲಿ ಸ್ವಾತಂತ್ರ ಹೊರಾಟಗಾರರು ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದರು. ಇವರ ಮೇಲೆ ಪೋಲೀಸರು ಹಲ್ಲೆ ಮಾಡಿದರು, ಇದರಿಂದ ಕುಪಿತಗೊಂಡ ಪೋಲೀಸರು ಪ್ರತಿಭಟನಾಕಾರರ ಮೆಲೆ ಗೋಲಿಬಾರ್ ಮಾಡಿದರು. ಶಸ್ತ್ರಾಸ್ತ್ರಗಳು ಖಾಲಿಯಾಗಿದ್ದರಿಂದ ಪೋಲೀಸ್ ಠಾಣೆಯೊಳಗೆ ಅಡಗಿಕೊಂಡರು. ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ಠಾಣೆಗೆ ಬೀಗಹಾಕಿ ಬೆಂಕಿಹಚ್ಚಿದರು. ಇದರಿಂದ 22 ಜನ ಪೋಲೀಸರು ಸಜೀವ ದಹನವಾದರು. ಈ ಘಟನೆಯನ್ನು ಇತಿಹಾಸದಲ್ಲಿ ಚೌರಿ–ಚೌರ ಘಟನೆ ಎಂದು ಕರೆಯಲಾಗಿದೆ
4. ಉಪ್ಪಿನ ಸತ್ಯಾಗ್ರಹವನ್ನು ವಿವರಿಸಿ
ಕಾನೂನುಭಂಗ ಚಳುವಳಿಯ ಅಂಗವಾಗಿ ಉಪ್ಪಿನ ಸತ್ಯಾಗ್ರಹವನ್ನು ಹಮ್ಮಿಕೊಳ್ಳಲಾಯಿತು. ಗಾಂಧೀಜಿಯವರು ತಮ್ಮ ಅನುಯಾಯಿಗಳೊಂದಿಗೆ ಸಬರಮತಿ ಆಶ್ರಮದಿಂದ ಸೂರತನ ಬಳಿ ಇರುವ ದಂಡಿವರೆಗೂ ಕಾಲ್ನಡಿಗೆಯಲ್ಲಿಯೇ ಯಾತ್ರೆ ಕೈಗೊಂಡರು. 1930ರ ಎಪ್ರಿಲ್ 06 ರಂದು ದಂಡಿಯನ್ನು ತಲುಪಿ ಉಪ್ಪನ್ನು ತಯಾರಿಸಿ ಜನರಿಗೆ ಉಚಿತವಾಗಿ ವಿತರಿಸಿದರು ಈ ಮೂಲಕ ಬ್ರಿಟಿಷರ ಉಪ್ಪಿನ ಮೇಲಿನ ಕಾನೂನನ್ನು ಉಲ್ಲಂಘಿಸಿದರು
5. ಕ್ವಿಟ್ ಇಂಡಿಯಾ ಚಳುವಳಿಯನ್ನು ವಿವರಿಸಿ
    - 1942 ರ ಆಗಸ್ಟ್ 09 ರಂದು ಈ ಚಳುವಳಿ ಜರುಗಿತು
    - ಕ್ರಿಪ್ಸ್ ಸಂಧಾನದ ವಿಫಲತೆಯಿಂದಾಗಿ ಚಳುವಳಿ ಜರುಗಿತು
    - ಮಹಾತ್ಮ ಗಾಂಧೀಜಿಯವರು ಚಳುವಳಿಯ ನಾಯಕರಾಗಿ ಆಯ್ಕೆಯಾದರು
    - ಗಾಂಧೀಜಿಯವರು 'ಮಾಡು ಇಲ್ಲವೇ ಮಡಿ' ಕರೆಯನ್ನು ನೀಡಿದರು
    - ಚಳುವಳಿಯ ಆರಂಭಕ್ಕೂ ಮೊದಲು ಗಾಂಧೀಜಿ,ನೆಹರೂ,ಸರ್ದಾರ್ ಪಟೇಲ್ ,ಆಜಾದ್, ರಾಜೇಂದ್ರ ಪ್ರಸಾದ್ ರನ್ನು ಬಂಧಿಸಲಾಯಿತು
    - ಕಾಂಗ್ರೆಸ್ ಪಕ್ಷದ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು
    - ಚಳುವಳಿಗೆ ನಾಯಕರಿಲ್ಲದಂತಾಯಿತು
    - ಜಯಪ್ರಕಾಶ್ ನಾರಾಯಣರವರು ಚಳುವಳಿಯ ನಾಯಕತ್ವವಹಿಸಿಕೊಂಡು ಮುನ್ನೆಡೆಸಿದರು
    - ಕಾಂಗ್ರೆಸ್ಸಿನ ಸಮಾಜವಾದಿ ಬಣದ ನಾಯಕರಾಗಿದ್ದ ಜಯಪ್ರಕಾಶರು ದೇಶದೆಲ್ಲೆಡೆ ಕ್ರಾಂತಿಕಾರಿ ಚಟುವಟಿಕೆಗಳನ್ನು ಸಂಘಟಿಸಿದರು
    - 'ದಿ ಫ್ರೀಡಂ ಸ್ಟ್ರಗಲ್ ಫ್ರಂಟ್' ಎಂಬ ದಾಖಲೆಯ ಮೂಲಕ ಚಳುವಳಿಯ ಕಾರ್ಯತಂತ್ರ ರೂಪಿಸಿದರು
    - ದೇಶದಾದ್ಯಂತ ಜನರು ಉಗ್ರ ಚಟುವಟಿಕೆಗಳನ್ನು ನಡೆಸಿದರು
    - ಬ್ರಿಟಿಷರು ಲಾಠಿ ಚಾರ್ಜ್,ಗೊಲಿಬಾರ್ ಮೂಲಕ ಚಳುವಳಿಯನ್ನು ನಿಯಂತ್ರಿಸಿದರು
6. ಭಾರತದ ಸ್ವಾತಂತ್ರ ಹೋರಾಟದಲ್ಲಿ ಕಂಡುಬಂದ ಪ್ರಮುಖ ತೀವ್ರಗಾಮಿಗಳ ಹೆಸರನ್ನು ಪಟ್ಟಿಮಾಡಿ
    - ಬಾಲಗಂಗಾಧರ ತಿಲಕ್
    - ಲಾಲ ಲಜಪತರಾಯ್
    - ಬಿಪಿನ್ ಚಂದ್ರಪಾಲ್
    - ಅರಬಿಂದೋ ಘೋಷ್
7. ಎರಡನೇ ದುಂಡು ಮೇಜಿನ ಸಮಾವೇಶದ ಫಲಿತಾಂಶವೇನು?
    - ಬ್ರಿಟೀಷರು ಅಸ್ಪೃಶ್ಯರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ಮಾನ್ಯಮಾಡಿದರು
    - ಗಾಂಧೀಜಿಯವರು ಇದನ್ನು ವಿರೋಧಿಸಿ ಸಮಾವೇಶವನ್ನು ಬಹಿಷ್ಕರಿಸಿದರು
8. ಭಾರತದ ಸ್ವಾತಂತ್ರ ಹೋರಾಟದಲ್ಲಿ ಸುಭಾಷ್ ಚಂದ್ರಬೋಸರ ಪಾತ್ರವನ್ನು ವಿವರಿಸಿ
    - ಜನರು ಇವರನ್ನು ಪ್ರೀತಿಯಿಂದ 'ನೇತಾಜಿ' ಎಂದು ಕರೆಯುತ್ತಿದ್ದರು

- ಗಾಂಧೀಜಿಯವರ ಜೊತೆ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದರು
- ನೆಹರುರವರ ಜೊತೆಯಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿದರು
- ಹರಿಪುರದಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ಧರು
- 1936 ರಲ್ಲಿ ಫಾರ್ವರ್ಡ್‌ಬ್ಲಾಕ್ ಪಕ್ಷವನ್ನು ಸ್ಥಾಪಿಸಿದರು
- ಜರ್ಮನಿಯಲ್ಲಿ ಹಿಟ್ಲರನ ನೆರವು ಪಡೆದರು
- 'ನನಗೆ ರಕ್ತ ಕೊಡಿ ನಾನು ನಿಮಗೆ ಸ್ವಾತಂತ್ರ ನೀಡುತ್ತೇನೆ' ಎಂದು ಘೋಷಿಸಿದರು
- ರಾಸ್ ಬಿಹಾರಿ ಬೋಸರಿಂದ 'ಭಾರತೀಯ ರಾಷ್ಟ್ರೀಯ ಸೇನೆ'ಯ ನಾಯಕತ್ವ ಪಡೆದರು
- ಭಾರತದ ಮೇಲೆ ಧಾಳಿಮಾಡಿ ಹತ್ತು ಸಾವಿರ ಚದರಮೈಲಿ ಪ್ರದೇಶವನ್ನು ವಶಪಡಿಸಿಕೊಂಡರು
- 'ದೆಹಲಿ ಚಲೋ' ಹಾಗು 'ಜೈ ಹಿಂದ್' ಘೋಷಣೆಗಳನ್ನು ನೀಡಿದರು
- ಶಸ್ತ್ರಾಸ್ತ್ರ ತರಲು ಹೊಗುವಾಗ ವಿಮಾನ ಅಫಘಾತದಲ್ಲಿ ಮಡಿದರು

9. ಭಾರತದ ಸ್ವಾತಂತ್ರ ಹೋರಾಟದಲ್ಲಿ ಬುಡಕಟ್ಟುವರ್ಗಗಳ ಬಂಡಾಯಗಳನ್ನು ವಿವರಿಸಿ
   ಬ್ರಿಟಿಷರು ಜಾರಿಗೆ ತಂದ ಕಂದಾಯ, ಅರಣ್ಯ ಮತ್ತು ಶಸ್ತ್ರಸ್ತ್ರ ಕಾಯ್ದೆಗಳು ಬುಡಕಟ್ಟುವರ್ಗಗಳ ಬಂಡಾಯಗಳಿಗೆ ಪ್ರಮುಖ ಕಾರಣವಾಗಿತ್ತು. ಸಂತಾಲರ ದಂಗೆ, ಮುಂಡ ಚಳುವಳಿ ಹಾಗೂ ಕರ್ನಾಟಕದ ಹಲಗಲಿಯ ಬೇಡರ ಬಂಡಾಯಗಳು ಪ್ರಮುಖವಾದವುಗಳಾಗಿವೆ
10. ಆಧುನಿಕ ಭಾರತದ ಶಿಲ್ಪಿಯಾಗಿ ನೆಹರೂರವರ ಕೊಡುಗೆಗಳನ್ನು ತಿಳಿಸಿ
    - ಇವರು ಭಾರತದ ಪ್ರಥಮ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು
    - ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು
    - ಮಿಶ್ರ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತಂದರು
    - ಅಲಿಪ್ತ ನೀತಿಯ ಮೂಲಕ ವಿಶ್ವದ ಗಮನ ಸೆಳೆದರು
    - ಪಂಚಶೀಲ ತತ್ವಗಳ ಮೇಲೆ ವಿದೇಶಾಂಗ ನೀತಿ ರೂಪಿಸಿದರು
    - ಸರ್ದಾರ್ ಪಟೇಲರ ನೆರವಿನಿಂದ ದೇಶಿಯ ಸಂಸ್ಥಾನಗಳ ವಿಲೀನಿಕರಣವನ್ನು ಪೂರ್ಣಗೊಳಿಸಿದರು
    - ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಪೂರ್ಣಗೊಳಿಸಿದರು
    - ಭಾರತದಲ್ಲಿ ಕೈಗಾರಿಕೀಕರಣವನ್ನು ಸಾಧಿಸಿದರು
    - ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸಿದರು
11. ಸಮಾಜ ಸುಧಾರಕರಾಗಿ ಡಾ.ಬಿ.ಆರ್.ಅಂಬೇಡ್ಕರ್‌ರವರ ಕೊಡುಗೆಗಳನ್ನು ವಿವರಿಸಿ
    - ಇವರು ಮಹಾನ್ ಮಾನವತವಾದಿಯಾಗಿದ್ದಾರೆ
    - ಬರೋಡದ ದಿವಾನರಾಗಿ ಸೇವೆ ಸಲ್ಲಿಸಿದರು
    - ಅಸ್ಪೃಶ್ಯರ ಉದ್ಧಾರಕ್ಕಾಗಿ 'ಕಾಲಾರಾಂ' ಮತ್ತು 'ಮಹದ್' ಚಳುವಳಿಯನ್ನು ಆರಂಭಿಸಿದರು.
    - ಬಹಿಷ್ಕೃತ ಹಿತಕರಿಣಿ ಸಭಾ ಸಂಘಟನೆಯನ್ನು ಸ್ಥಾಪಿಸಿದರು
    - ಸ್ವತಂತ್ರ ಕಾರ್ಮಿಕ ಪಕ್ಷ ಎಂಬ ರಾಜಕೀಯ ಪಕ್ಷ ಸ್ಥಾಪಿಸಿದರು
    - 'ಪ್ರಬುದ್ಧ ಭಾರತ' 'ಜನತಾ' 'ಮೂಕನಾಯಕ' 'ಬಹಿಷ್ಕೃತ ಭಾರತ' ಪತ್ರಿಕೆಗಳನ್ನು ಹೊರಡಿಸಿದರು
    - ಸಂವಿಧಾನ ರಚನಾ ಸಭೆಯ ಕರಡು ಸಮಿತಿಯ ಅಧ್ಯಕ್ಷರಾಗಿದ್ಧರು
    - ಕೃಷಿ ಕಾರ್ಮಿಕರ ಏಳಿಗೆಗಾಗಿಯೂ ಹೋರಾಟ ಮಾಡಿದರು
    - ಸ್ವತಂತ್ರ ಭಾರತದ ಕಾನೂನುಮಂತ್ರಿಯಾಗಿ ಸೇವೆ ಸಲ್ಲಿಸಿದರು
    - ಜೀವಮಾನ ಸಾಧನೆಗಾಗಿ 'ಭಾರತರತ್ನ' ಪ್ರಶಸ್ತಿಯನ್ನು ಮರಣೋತ್ತರವಾಗಿ ಪಡೆದುಕೊಂಡರು

12. ಸವಿನಯ ಕಾನೂನುಭಂಗ ಚಳುವಳಿಯನ್ನು ವಿವರಿಸಿ

- ಈ ಚಳುವಳಿಯು 1929 ರ ಲಾಹೋರ್ ಕಾಂಗ್ರೆಸ್ ಅಧಿವೇಶನದ ನಿರ್ಣಯದಂತೆ ಹಮ್ಮಿಕೊಳ್ಳಲಾಯಿತು
- ಮಹಾತ್ಮ ಗಾಂಧೀಜಿಯವರು ಇದರ ನಾಯಕತ್ವ ವಹಿಸಿದ್ದರು
- ಈ ಚಳುವಳಿಯ ಭಾಗವಾಗಿ ಉಪ್ಪಿನ ಸತ್ಯಾಗ್ರಹ. ಅರಣ್ಯ ಸತ್ಯಾಗ್ರಹ, ಕರನಿರಾಕರಣ ಚಳುವಳಿ, ಹಾಗೂ ಪಾನ ನಿರೋಧ ಚಳುವಳಿಗಳು ಜರುಗಿದವು
- ಗಾಂಧೀಜಿವರು ಹನ್ನೊಂದು ಬೇಡಿಕೆಗಳನ್ನು ಈಡೇರಿಸುವಂತೆ ವೈಸರಾಯ್ ಇರ್ವಿನ್‌ರವರಿಗೆ ಮನವಿ ಸಲ್ಲಿಸಿದರು
- ವೈಸರಾಯ್ ಇರ್ವಿನ್‌ರು ಬೇಡಿಕೆಗಳನ್ನು ತಿರಸ್ಕರಿಸಿದಾಗ 'ದಂಡಿ ಯಾತ್ರೆ' ಆರಂಭಿಸಿದರು
- ಸಬರಮತಿ ಆಶ್ರಮದಿಂದ ಕಾಲ್ನಡಿಗೆಯಲ್ಲಿ ದಂಡಿಯಾತ್ರೆ ಜರುಗಿತು
- 1930 ರ ಏಪ್ರಿಲ್ 06 ರಂದು ದಂಡಿಯಲ್ಲಿ ಉಪ್ಪಿನ ಮೇಲಿನ ಕಾನೂನು ಉಲ್ಲಂಘಿಸುವುದರ ಮೂಲಕ ಉಪ್ಪಿನ ಸತ್ಯಾಗ್ರಹ ಹಾಗೂ ಕಾನೂನುಭಂಗ ಚಳವಳಿಗಳು ಆರಂಭಗೊಂಡವು
- ದೇಶದಾದ್ಯಂತ ಜನರು ಉಪ್ಪಿನ ಸತ್ಯಾಗ್ರಹವನ್ನು ಯಶಸ್ವಿಯಾಗಿ ನಡೆಸಿ ಸೆರೆಮನೆವಾಸ ಅನಭವಿಸಬೇಕಾಯಿತು
- ಗಾಂಧೀಜಿ ಸೇರಿದಂತೆ ಬಹುತೇಕ ನಾಯಕರು ಬಂಧಿಸಲ್ಪಟ್ಟರು
- ಕರನಿರಾಕರಣ ಚಳುವಳಿಯ ಅಂಗವಾಗಿ ರೈತರು ಕಂದಾಯ ಪಾವತಿಯನ್ನು ನಿಲ್ಲಿಸಿ ಪ್ರತಿಭಟನೆ ಮಾಡಿದರು
- ಅರಣ್ಯ ಕಾನೂನನ್ನು ಉಲ್ಲಂಘಿಸಿ ಅರಣ್ಯ ಸತ್ಯಾಗ್ರಹವನ್ನು ನಡೆಸಲಾಯಿತು

## ಅಧ್ಯಾಯ-9
## ಸ್ವಾತಂತ್ರೋತ್ತರ ಭಾರತ

**I ಖಾಲಿ ಜಾಗವನ್ನು ಸರಿಯಾದ ಉತ್ತರಗಳಿಂದ ಭರ್ತಿಮಾಡಿ**

1. ಕಂಪನಿಯ ಕೊನೆಯ ಗವರ್ನರ್ ಜನರಲ್ **ಲಾರ್ಡ್ ಮೌಂಟ್ ಬ್ಯಾಟನ್** ಆಗಿದ್ದನು
2. ಭಾರತದ ಪ್ರಥಮ ಗೃಹಮಂತ್ರಿ **ಸರ್ದಾರ್ ವಲ್ಲಭಬಾಯಿ ಪಟೇಲ್**
3. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು **ಡಾ.ಬಾಬು ರಾಜೇಂದ್ರ ಪ್ರಸಾದ್**
4. ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವಾಗಿ **1963** ರಲ್ಲಿ ಸೇರಿತು
5. ರಾಜ್ಯ ಪುನರ್ವಿಂಗಡಣಾ ಕಾನೂನು **1956** ರಲ್ಲಿ ಜಾರಿಗೆ ಬಂದಿತು

**II ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

1. ಭಾರತ ಸ್ವಾತಂತ್ರಗೊಂಡ ಸಮಯದಲ್ಲಿ ಎದುರಿಸಬೇಕಾಗಿ ಬಂದ ಸಮಸ್ಯೆಗಳಾವುವು?
   - ನಿರಾಶ್ರಿತರ ಸಮಸ್ಯೆ
   - ಮತೀಯ ಗಲಭೆಗಳು
   - ದೇಶಿಯ ಸಂಸ್ಥಾನಗಳ ವಿಲೀನೀಕರಣ
   - ಭಾಷಾವಾರು ಪ್ರಾಂತ್ಯಗಳ ರಚನೆ
2. ನಿರಾಶ್ರಿತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು?
   - ನಿರಾಶ್ರಿತರಿಗೆ ವಸತಿ ಸೌಲಭ್ಯ ಕಲ್ಪಿಸಲಾಯಿತು
   - ಉದ್ಯೋಗವಕಾಶಗಳನ್ನು ಸೃಷ್ಟಿಸಲಾಯಿತು
   - ಶಿಕ್ಷಣ ಸೌಲಭ್ಯ ಕಲ್ಪಿಸಲಾಯಿತು

- ಆರೋಗ್ಯ ಸೌಲಭ್ಯ ನೀಡಲಾಯಿತು

3. ಪಾಂಡಿಚೇರಿಯನ್ನು ಫ್ರೆಂಚರಿಂದ ಹೇಗೆ ವಿಮುಕ್ತಿಗೊಳಿಸಲಾಯಿತು?
    - ಕಾಂಗ್ರೆಸ್, ಕಮ್ಯುನಿಸ್ಟ್, ಇತರ ಸಂಘಟನೆಗಳು ಪಾಂಡಿಚೇರಿಯ ವಿಮುಕ್ತಿಗಾಗಿ ಹೊರಾಟ ನಡೆಸಿದವು
    - ಫ್ರಾನ್ಸ್ ಸರ್ಕಾರದೊಂದಿಗೆ ಮಾತುಕತೆಗಳನ್ನು ಸಡೆಸಿ ಪಾಂಡಿಚೇರಿಯನ್ನು ವಿಮುಕ್ತಿಗೊಳಿಸಲಾಯಿತು
4. ಭಾಷಾವಾರು ಪ್ರಾಂತ್ಯಗಳ ವಿಂಗಡಣಾ ಕ್ರಮವನ್ನು ಬರೆಯಿರಿ
    - 1953ರಲ್ಲಿ ಫಜಲ್ ಅಲಿ ಆಯೋಗವನ್ನು ರಚಿಸಲಾಯಿತು
    - ಈ ಆಯೋಗವು 1956ರಲ್ಲಿ ವರದಿ ನೀಡಿತು
    - ಈ ಆಯೋಗದ ವರದಿಯನ್ನು 1956 ರ ರಾಜ್ಯ ಪುರ್ನವಿಂಗಡಣಾ ಕಾಯ್ದೆಯನ್ನಾಗಿ ಜಾರಿಗೆ ತಂದು ಭಾಷಾವಾರು ಪ್ರಾಂತ್ಯಗಳನ್ನು ರಚಿಸಲಾಯಿತು
5. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು?
    - ಗೋವಾದ ಮುಕ್ತಿಗಾಗಿ ನಿರಂತರ ಚಳುವಳಿ ಜರುಗಿತು
    - ಭಾರತದ ವಿವಿಧ ಭಾಗಗಳಿಂದ ಆಗಮಿಸಿದ ಸತ್ಯಾಗ್ರಹಿಗಳು ಗೋವಾ ವಿಮೋಚನೆಗಾಗಿ ಹೋರಾಡಿದರು
    - 1961 ರಲ್ಲಿ ಭಾರತೀಯ ಸೇನೆ ಗೋವಾವನ್ನು ಪೋರ್ಚುಗೀಸರಿಂದ ವಶಪಡಿಸಿಕೊಂಡಿತು

## ಅಧ್ಯಾಯ –10,
## 20ನೇ ಶತಮಾನದ ರಾಜಕೀಯ ಆಯಾಮಗಳು

**I ಖಾಲಿ ಜಾಗವನ್ನು ಸರಿಯಾದ ಉತ್ತರಗಳಿಂದ ಭರ್ತಿಮಾಡಿ**

1. ರಷ್ಯಾದಲ್ಲಿ ಕಮ್ಯುನಿಸ್ಟ್ ಸಕಾರವನ್ನು ಸ್ಥಾಪಿಸಿದವರು **ಲೆನಿನ್**
2. ಮೊದಲನೇ ಮಹಾಯುದ್ಧವು **1918** ರಲ್ಲಿ ಅಂತ್ಯಗೊಂಡಿತು
3. ವರ್ಸ್ಸೇಲ್ಸ್ ಒಪ್ಪಂದ **1919** ರಲ್ಲಿ ಏರ್ಪಟ್ಟಿತು
4. ಫ್ಯಾಸಿಸ್ಟ್ ಸರ್ವಾಧಿಕಾರಿಯಾಗಿದ್ಧವನು **ಬೆನಿಟೊ ಮುಸೋಲಿನಿ**
5. ಜರ್ಮನಿಯಲ್ಲಿ ನಾಜಿ ಪಕ್ಷದ ನಾಯಕನಾಗಿದ್ಧವನು **ಅಡಾಲ್ಫ್ ಹಿಟ್ಲರ್**
6. ಎರಡನೇ ಮಹಾಯುದ್ಧವು **1939** ರಲ್ಲಿ ಆರಂಭಗೊಂಡಿತು
7. ಅಮೇರಿಕಾದ ನೌಕಾ ಕೇಂದ್ರವಾಗಿದ್ದ **ಪರ್ಲ್ ಹಾರ್ಬರ್** ಮೇಲೆ ಜಪಾನ್ ಧಾಳಿ ಮಾಡಿತು

**II ಒಂದು ಅಂಕದ ಪ್ರಶ್ನೋತ್ತರಗಳು.**

1. ಒಂದನೇ ಮಹಾಯುದ್ಧದ ತತ್‌ಕ್ಷಣದ ಕಾರಣವೇನು?
   ಆಸ್ಟ್ರೀಯಾದ ರಾಜಕುಮಾರ ಫ್ರಾನ್ಸಿಸ್ ಫರ್ಡಿನಾಂಡನ ಹತ್ಯೆಯು ಒಂದನೇ ಮಹಾಯುದ್ಧದ ತತ್‌ಕ್ಷಣದ ಕಾರಣವಾಗಿದೆ
2. ರಷ್ಯಾದ ಜನರಿಗೆ 'ಶಾಂತಿ,ಆಹಾರ,ಭೂಮಿ' ಎಂಬ ಜನಪ್ರಿಯ ಘೋಷಣೆ ನೀಡಿದವರು ಯಾರು?
   ಲೆನಿನ್
3. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದವನು
   ಜೋಸೆಫ್ ಸ್ಟಾಲಿನ್
4. ಗ್ಲಾಸ್ನ್‌ನೊಸ್ತ್ ಮತ್ತು ಪೆರಿಸ್ಟ್ರೋಯಿಕ ಸುಧಾರಣೆಗಳನ್ನು ರಷ್ಯಾದಲ್ಲಿ ಜಾರಿಗೆ ತಂದವನು
   ಮಿಖಾಯಿಲ್ ಗೊರ್ಬಚೇವ್
5. ಹಿಟ್ಲರ್ ಸ್ಥಾಪಿಸಿದ ಕಾರ್ಯಪಡೆ
   ಬೂದುಅಂಗಿ ದಳ
6. ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷದ ಸ್ಥಾಪಕರು
   ಬೆನಿಟೊ ಮುಸೊಲಿನಿ

7. ಎರಡನೇ ಮಹಾಯುದ್ಧದ ತತ್‌ಕ್ಷಣದ ಕಾರಣವೇನು?
   ಜರ್ಮನಿಯು ಪೋಲೆಂಡ್ ಮೇಲೆ ನಡೆಸಿದ ಧಾಳಿ
8. ಅಮೇರಿಕಾ ಎರಡನೇ ಮಹಾಯುದ್ಧ ಪ್ರವೇಶಿಸಲು ಕಾರಣವೇನು?
   ಜಪಾನ್ ಪರ್ಲ್‌ಹಾರ್ಬರ್ ನೌಕಾನೆಲೆಯ ಮೇಲೆ ನಡೆಸಿದ ಧಾಳಿ
9. ಚೀನಾದಲ್ಲಿ ಕಮ್ಯುನಿಸ್ಟ್‌ರ 'ದೀರ್ಘ ಪಯಣ'ದ ನೇತೃತ್ವ ವಹಿಸಿದವರು ಯಾರು?
   ಮಾವೊತ್ಸೆ ತುಂಗ್
10. ಶೀತಲ ಸಮರ ಎಂದರೇನು?
   ಪ್ರಜಾಪ್ರಭುತ್ವ ಅಮೇರಿಕಾ ಹಾಗೂ ಕಮ್ಯುನಿಸ್ಟ್ ರಷ್ಯಾಗಳ ನಡುವಿನ ಪರೋಕ್ಷ ಯುದ್ಧವೇ ಶೀತಲ ಸಮರ
11. 1929ರಲ್ಲಿ ಆರ್ಥಿಕ ಮಹಾಕುಸಿತ ಸಂಭವಿಸಿದ ದೇಶ
   ಅಮೇರಿಕ
12. ಹಿಟ್ಲರ್ ಸ್ಥಾಪಿಸಿದ ಪಕ್ಷ
   ನಾಜಿ ಪಕ್ಷ
13. 1917 ರಲ್ಲಿ ಕ್ರಾಂತಿ ಸಂಭವಿಸಿದ ದೇಶವನ್ನು ಹೆಸರಿಸಿ
   ರಷ್ಯಾ ದೇಶ

**III** ಎರಡು ಅಂಕದ ಪ್ರಶ್ನೋತ್ತರಗಳು

1. ರಷ್ಯಾ ಕ್ರಾಂತಿಯಲ್ಲಿ ಲೆನಿನ್‌ನ ಪಾತ್ರವನ್ನು ವಿವರಿಸಿ
   - ಫೆಬ್ರವರಿ ಕ್ರಾಂತಿಯ ನಂತರ ಲೆನಿನ್ ರಷ್ಯಾಗೆ ಹಿಂದಿರುಗಿದನು
   - ಶಾಂತಿ, ಆಹಾರ, ಭೂಮಿ ಎಂಬ ಜನಪ್ರಿಯ ಘೋಷಣೆಗಳನ್ನು ನೀಡಿದನು
   - 1917 ರ ಅಕ್ಟೋಬರ್ ಕ್ರಾಂತಿಯ ನಾಯಕತ್ವ ವಹಿಸಿದನು
   - ರಷ್ಯಾವನ್ನು ಸಮಾಜವಾದಿ ಗಣರಾಜ್ಯವೆಂದು ಘೋಷಿಸಿದನು
2. ಮೊದಲನೇ ಮಹಾಯುದ್ಧಕ್ಕೆ ಕಾರಣಗಳೇನು?
   - ಅತ್ಯುಗ್ರ ರಾಷ್ಟ್ರೀಯತೆ
   - ಶಸ್ತ್ರಾಸ್ತ್ರ ಪೈಪೋಟಿ
   - ಪರಸ್ಪರ ಬಣಗಳ ರಚನೆ
   - ಆಸ್ಟ್ರಿಯಾದ ರಾಜಕುಮಾರ ಫರ್ಡಿನಾಂಡನ ಕಗ್ಗೊಲೆ
3. ರಷ್ಯಾ ಕ್ರಾಂತಿಗೆ ಕಾರಣಗಳೇನು ?
   - ಝಾರ್ ದೊರೆಗಳ ದುರಾಡಳಿತ
   - ಆರ್ಥಿಕ ಅಸಮಾನತೆ
   - ಕಮ್ಯುನಿಸ್ಟರ ಪ್ರಭಾವ
   - ರಾಜಕೀಯ ಕಾರಣಗಳು
4. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣೆಗಳಾವುವು?
   - ಪಂಚವಾರ್ಷಿಕ ಯೊಜನೆಗಳನ್ನು ಜಾರಿಗೆ ತಂದನು
   - ಬಾಹ್ಯಕಾಶಕ್ಕೆ ಉಪಗ್ರಹಗಳ ಉಡಾವಣೆ ಮಾಡಲಾಯಿತು
   - ಸಾಮೂಹಿಕ ಕೃಷಿಯನ್ನು ಜಾರಿಗೆ ತಂದನು
   - ಅಮೇರಿಕಾಕ್ಕೆ ಸರಿಸಮಾನಾಗಿ ರಷ್ಯಾವನ್ನು ಬೆಳೆಸಿದನು
5. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳುಗೆಡವಿತು' ಈ ಹೇಳಿಕೆಯನ್ನು ಸಮ್ಮರ್ಥಿಸಿ
   - ಹಿಟ್ಲರ್ ಸಾಮೂಹಿಕ ಕಗ್ಗೊಲೆಗಳನ್ನು ಮಾಡಿಸಿದನು
   - ಅತ್ಯುಗ್ರ ರಾಷ್ಟೀಯತೆಯನ್ನು ಜರ್ಮನಿಯಲ್ಲಿ ಪ್ರಸಾರಮಾಡಿದನು

- ಸರ್ವಾಧಿಕಾರಿ ಧೋರಣೆಯಿಂದ ಎರಡನೇ ಮಹಾಯುದ್ಧಕ್ಕೆ ಕಾರಣನಾದನು
- ಎರಡನೇ ಮಹಾಯುದ್ದದಲ್ಲಿ ಸೊತು ಜರ್ಮನಿಯ ನಾಶಕ್ಕೆ ಕಾರಣನಾದನು

6. ಎರಡನೇ ಮಹಾಯುದ್ದಕ್ಕೆ ಪ್ರಮುಖ ಕಾರಣಗಳೇನು?
   - ಅತ್ಯುಗ್ರ ರಾಷ್ಟ್ರೀಯತೆ
   - ಶಸ್ತಾಸ್ತ್ರ ಪೈಪೋಟಿ
   - ಸರ್ವಾಧಿಕಾರಿಗಳ ಏಳಿಗೆ
   - ಜರ್ಮನಿಯು ಪೋಲೆಂಡಿನ ಮೇಲೆ ಸಡೆಸಿದ ಧಾಳಿ
7. ಚೀನಾ ಕ್ರಾಂತಿಯ ಪರಿಣಾಮಗಳೇನು?
   - ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೆ ತರಲಾಯಿತು
   - ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ನೀಡಲಾಯಿತು
   - ಎಲ್ಲರಿಗೂ ಉಚಿತ ಆರೋಗ್ಯ, ಶಿಕ್ಷಣ ನೀಡಲಾಯಿತು
   - ಸಾಂಸ್ಕೃತಿಕ ಕ್ರಾಂತಿ ಸಂಭವಿಸಿತು
   - ಮುನ್ನಡೆಯ ಮಹಾಜಿಗಿತ ನೀತಿಯನ್ನು ಜಾರಿಗೆ ತರಲಾಯಿತು
8. ಅಮೇರಿಕಾವು ಆರ್ಥಿಕ ಮಹಾಕುಸಿತದಿಂದ ಹೇಗೆ ಹೊರಬಂದಿತು
   - ನೂತನ ಯೋಜನೆ (ನ್ಯೂ ಡೀಲ್) ಯನ್ನು ಜಾರಿಗೆ ತರಲಾಯಿತು
   - ಕೆಲಸಗಾರರಿಗೆ ಕಡಿಮೆ ಅವಧಿಯ ಕೆಲಸ ಹಾಗೂ ಹೆಚ್ಚು ವೇತನ ನೀಡಲಾಯಿತು